
ಒಂದಾಣೆ ಮಾಲೆ. **80**

ಡಾಕ್ಟರ್ ಗಾಂಧೀಜಿ

ಅಥವಾ ನಿಸರ್ಗಚಿಕಿತ್ಸೆ ಮತ್ತು ಗಾಂಧೀಜಿ



ಲೇಖಕರು: ಶ್ರೀ ಮರಕ್ಕಿಣಿ ಶಂಕರನಾರಾಯಣ ಭಟ್, B.Sc., B.L.

1956 ಮಂಗಳೂರು. ಬೆಲೆ: ಒಂದಾಣೆ.

ಒಂದಾಣೆ ಮಾಲೆ—·—ಮಂಗಳೂರು

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧. *ಕೆಪ್ಪಟೆರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ)
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. ಅದ್ಭುತ ತ್ಯಾಗ (ದ್ವಿತಿಯ ಮುದ್ರಣ)
೬. *ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
೮. *ಇಂಗ್ಲಿಷ್–ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. *ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ದ್ವಿತೀಯ ಮುದ್ರಣ)
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ)
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. ಭಾರತದ ಮಹಾನಗರ (ದ್ವಿ. ಮುದ್ರಣ)
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ)
೨೩. ಸೂರ್ಯನ ಸಂಸಾರ
೨೪. ಭಾರತದ ಮಹಾನಗರ (ದ್ವಿ. ಮುದ್ರಣ)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. ಮಾರಾವತಾರ (ದ್ವಿತೀಯ ಮುದ್ರಣ)
೨೭. ಹಾಸವಿಲಾಸ (ನಗೆಹನಿಗಳು)
೨೮. *ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಚಾಣಕ್ಷೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಸೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ, ಇತರ ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ)
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳು
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.
೪೯ ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟಿಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟ ಬಿಟ್ಟ ಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯಪರ್
೬೪. ಲೌಕಿಕ ನ್ಯಾಯಗಳು
೬೫. ಶಿಶುಪಾಲ ಮಾನಭಂಗ
೬೬. ಜರಾಸಂಧ ವಧೆ
೬೭. ಜವಾಹರಲಾಲರ ಜೀವನ ಚರಿತ್ರೆ
೬೮. ಕರುಣೆ ಮತ್ತು ಇತರ ಕಥೆಗಳು
೬೯. ಶ್ರೀಕ್ಷೇತ್ರ ಉಡುಪಿ
೭೦. ವಿನೋದ ವಿಹಾರ
೭೧ ಭಾರತದ ಗತವೈಭವ
೭೨ ಸತ್ಯ ಹರಿಶ್ಚಂದ್ರ
೭೩. ಸೂಕ್ತಿಗಳು.
೭೪ ಉ. ಕ. ದ ಯಕ್ಷಗಾನ ಕಲಾವಿದರು
೭೫ ದೇವರ ಸಾಮ್ರಾಜ್ಯದಲ್ಲಿ
೭೬. ಕ್ರಾಂತಿಕಂಠೀರವ ಭಗತ್ ಸಿಂಘ್
೭೭. ಜಾತಕಪಠನ ಮತ್ತು ಇತರ ಕಥೆಗಳು
೭೮. ಅಮೃತವಾಣಿ
೭೯. ಮಾಯಾಮೃಗ
೮೦. ಡಾಕ್ಟರ್ ಗಾಂಧೀಜಿ

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಡಾಕ್ಟರ್ ಗಾಂಧೀಜಿ

ಜನವರಿ ೩೦! ಮೂರು ಬಾರಿ ಗುಂಡು ಹಾರಿತು. ಗಾಂಧೀಜಿ ಬಿದ್ದರು. ಅವರ ದೇಹವು ಕಂಪಿಸುತ್ತಿತ್ತು. ಕಣ್ಣುಗಳು ಅರೆಮುಚ್ಚಿದ್ದುವು. ಅಂದು ಡಾಕ್ಟರ್ ಸುಶೀಲಾ ನಾಯರ್ ಎಲ್ಲೋ ಬಲು ದೂರವಿದ್ದರು. ಅಪ್ತರು ಒಡನೆ ಡಾಕ್ಟರ್ ಭಾರ್ಗವರನ್ನು ಕರೆತಂದರು. ಭಾರ್ಗವರು, ಸುಶೀಲಾ ನಾಯರರು ಆಪತ್ಕಾಲಗಳಲ್ಲಿ ಉಪಯೋಗಿಸುತ್ತಿದ್ದ ಔಷಧಗಳ ಪೆಟ್ಟಿಗೆಯನ್ನು ಹುಡುಕಾಡತೊಡಗಿದರು. ಕೊನೆಗಾದರೂ ರಾಷ್ಟ್ರಪಿತನ ಪ್ರಾಣ ಉಳಿಯುವುದಾದರೆ.... ಎಂಬ ಆಸೆ ಭಾರ್ಗವರದಾಗಿತ್ತು. ಆದರೆ, ಗಾಂಧೀಜಿ ಔಷಧಗಳ ಪ್ರಬಲ ವಿರೋಧಿಗಳೆಂಬುದು ಭಾರ್ಗವರಿಗೆ ತಿಳಿದಿಲ್ಲವೆಂದು ತೋರುತ್ತದೆ. ಅಥವಾ ತಿಳಿದಿದ್ದರೂ ಇಂತಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಗಾಂಧೀಜಿ ಹಟ ಹಿಡಿಯರೆಂಬ ನಂಬುಗೆಯೋ ಏನೋ. ಇದರ ಮೊದಲು ಎಷ್ಟೋ ಬಾರಿ ತಮಗೆ ಮದ್ದು ಕುಡಿಯಿಸಲು ಬಂದ ಡಾಕ್ಟರರನ್ನು ಗಾಂಧೀಜಿ ಮದ್ದು ಸಮೇತ ಹಿಂದೆ ಕಳುಹಿಸಿದ್ದರು. ಕೆಲವು ಬಾರಿ ಅಂತಹ ಡಾಕ್ಟರರಿಗೇ ಗಾಂಧೀಜಿಯವರ "ರೋಗ"ವು ಹರಡುವುದೂ ಇತ್ತು. ಗಾಂಧೀಜಿಯವರ ರೋಗ ಇನ್ನೇನೂ ಅಲ್ಲ—ನಿಸರ್ಗ ಚಿಕಿತ್ಸೆ. ನಿಸರ್ಗ ಚಿಕಿತ್ಸೆಯು ಅವರ ಒಂದೇ ಬಾಣ ಡಾಕ್ಟರರ ಎಲ್ಲಾ ಔಷಧಿಗಳನ್ನೂ ನುಂಗಿತ್ತು. ನಿಸರ್ಗ ಚಿಕಿತ್ಸೆಗೂ ವೈದ್ಯಶಾಸ್ತ್ರಕ್ಕೂ ತಾತ್ವಿಕ ಮತಭೇದ ತುಂಬಾ ಇದೆ. ಅದರಿಂದಾಗಿ ಡಾಕ್ಟರರಿಗೂ ಗಾಂಧೀಜಿಗೂ ಸದಾ ಕರ್ಣಾರ್ಜುನ—ಒಂದೇ ವಿಚಾರದಲ್ಲಿ—ಆರೋಗ್ಯ ವಿಚಾರದಲ್ಲಿ. ಲೋಕವನ್ನೆಲ್ಲ ಮಾತನಾಡಿ ಕೊನೆಗೆ ಆರೋಗ್ಯ, ರೋಗ ಇತ್ಯಾದಿ ಮಾತು ಬಂದಾಗ ಗಾಂಧೀಜಿ ನಿಸರ್ಗ ಚಿಕಿತ್ಸೆಗೆ.

ಒಂದು ಬಾರಿ ದಿಲ್ಲಿಯಲ್ಲಿದ್ದಾಗ ಗಾಂಧೀಜಿ ಕಾಯಿಲೆ ಬಿದ್ದರು. ಕೆಮ್ಮು ಕಠಿಣವಾಗಿಯೇ ಇತ್ತು. ಗಾಂಧೀಜಿಯವರ ಕಷ್ಟನೋಡಿ ಡಾ। ಸುಶೀಲಾ ನಾಯರರು ಪೆನ್ಸಿಲಿನ್ ಸೇವಿಸುವಂತೆ ಗಾಂಧೀಜಿಯನ್ನು ಒತ್ತಾಯಿಸಿದರು. ಆದರೆ ಗಾಂಧೀಜಿ ಒಪ್ಪಲಿಲ್ಲ. ತಾನು ಮಾಡಿದ ಯಾವುದೋ ಪಾಪದ ಫಲವಾಗಿ ಕೆಮ್ಮು ಹತ್ತಿದೆಯೆಂದು ಅವರ ನಂಬುಗೆ. ಗಾಂಧೀಜಿಗೆ ಪಾಪವೆಂದರೆ ಕರ್ತವ್ಯಲೋಪ; ಪ್ರಕೃತಿಯ ನಿಯಮಗಳ ಉಲ್ಲಂಘನೆ. ಅಂತಹ ಪಾಪಕ್ಕೆ ಪಶ್ಚಾತ್ತಾಪವೇ ತಕ್ಕ ಮದ್ದೆಂದುಕೊಂಡು ಅವರು ಪೆನ್ಸಿಲಿನ್ ತಿನ್ನಲಿಲ್ಲ. ಪೆನ್ಸಿಲಿನ್ ತಿಂದು ತನ್ನ ಹಿಂದಿನ ಆಹಾರದೋಷಗಳಿಂದ ಬಂದ ರೋಗವನ್ನು ಪರಿಹರಿಸಬಹುದೆಂಬ ಸುಲಭ ಸಿದ್ಧಾಂತದಲ್ಲಿ ಅವರಿಗೆ ನಂಬುಗೆಯಿರಲಿಲ್ಲ. ಕೆಮ್ಮಿದರು, ಹತ್ತು ಹದಿನಾರು

ದಿನವೂ ಕೆಮ್ಮಿದರು. ಅವರ ಆಕಾಶವಾಣಿ ಭಾಷಣದೊಂದಿಗೆ ಈ ಕೆಮ್ಮೂ ಪ್ರಸಾರ ವಾಯಿತು. ಕೊನೆಗಂತೂ ಜಲಚಿಕಿತ್ಸೆಯ ಸಹಾಯದಿಂದ ಗುಣಪಡಿಸಿಕೊಂಡರು. ನಾಯರರು ಸೋತರು,

ಅದೊಂದು ಸಾಗರ: ಸುಶೀಲಾ ನಾಯರರು ಗಾಂಧೀಜಿಯ ಶಿಷ್ಯ ರಾದರೂ ಹದಿನಾರಾಣೆ ಎಲೋಪೆಥಿಯವರು. ಅವರಂತೆಯೇ ಗಾಂಧೀಜಿಯ ಪಾರ್ಶ್ವಾನುಯಾಯಿಗಳು ಇನ್ನೂ ಅನೇಕ ಡಾಕ್ಟರರಿದ್ದಿರಬಹುದು. ಗಾಂಧೀಜಿ ಆ ಕಾಲದಲ್ಲಿ ಯಾರ ಮೇಲೂ ನಿಸರ್ಗಚಿಕಿತ್ಸೆಯನ್ನು ಹೇರುತ್ತಿದ್ದಿಲ್ಲ. ಪ್ರಯೋಗ, ಪರೀಕ್ಷೆಗಳನ್ನು ಮಾಡಿಕೊಂಡು ತನ್ನಲ್ಲೇ ಅದರ ಬೆಲೆಯನ್ನು ನಿರ್ಣೈಸುವುದರಲ್ಲಿ ದ್ದರು. ಇತರರಿಗೂ ಇದನ್ನು ಹರಡಬೇಕೆಂಬ ಕುತೂಹಲ ಅವರಿಗುಂಟಾದುದು ಮತ್ತೆ. ಆ ವರೆಗೆ ಅವರೊಂದು ಸಾಗರದಂತೆ. 'ಯಾರೂ ನೀರು ತೋಡಿಕೊಳ್ಳ ಬಹುದು—ಇಚ್ಛೆ ಇದ್ದರೆ'—ಹಾಗಿದ್ದರು. ಎಷ್ಟೋ ಮಂದಿ ತಮಗೆ ಆಳವಾದಷ್ಟು ನೀರು ತಾವೇ ತೋಡಿಕೊಳ್ಳುತ್ತಿದ್ದರು. "ನಿಸರ್ಗ ಚಿಕಿತ್ಸಕನು ರೋಗಿಗಳನ್ನು ಕರೆದು ತಾನು ಸ್ವತಃ ನಿಸರ್ಗ ಜೀವನದ ದಾರಿದಲ್ಲಿದ್ದುಕೊಂಡು ಇತರರಿಗೆ ಮಾದರಿ ಯಂತಿರುತ್ತಾನೆ. ಅದೊಂದು ಕುಪ್ಪಿಯಲ್ಲಿ ಮಾರುವ ಚಿಕಿತ್ಸೆಯಲ್ಲ; ಜೀವನದ ರೀತಿ" ಎಂಬುದಾಗಿ ಗಾಂಧೀಜಿ ವಿವರಿಸಿದರು.

ಚಿಕ್ಕಂದಿನಿಂದಲೂ ನಿಸರ್ಗಚಿಕಿತ್ಸೆಯ ಹುಚ್ಚು: ನಿಸರ್ಗ ಚಿಕಿತ್ಸೆಗೆ ಗಾಂಧೀಜಿ ತಿರುಗಿದ್ದು ಚಿಕ್ಕಂದಿನಲ್ಲೇ. ಸದ್ಯವೇನೂ ಅಲ್ಲ. ಆದರೆ, ಅದು ಸಾರ್ವಜನಿಕರಂಗದಲ್ಲಿ ಪ್ರಕಟವಾದುದು ಮಾತ್ರ ಮೊನ್ನೆ ಮೊನ್ನೆ— ಅವರು ಸಾಯುವ ಒಂದೂಮುಕ್ಕಾಲು ವರ್ಷ ಮೊದಲು—೧೯೪೬ರಲ್ಲಿ— ಉರುಲಿಕಾಂಚನ ದಲ್ಲಿ. ೧೯೪೬ನೇ ಮಾರ್ಚ ೨೩ನೇ ತಾರೀಕು ಒಂದು ಪುಣ್ಯದಿನ. ಗಾಂಧೀಜಿಗೆ ಮಾತ್ರವಲ್ಲ ನಮಗೆಲ್ಲರಿಗೂ. ಗಾಂಧೀಜಿಯ ಜೀವನದ ಆಕಾಂಕ್ಷೆಯು ಕುಡಿ ಚಿಗುರಿ ಫಲಬಿಟ್ಟ ದಿನ ಅಂದು. ಅವರು ಉರುಲಿಕಾಂಚನದಲ್ಲಿ ನಿಸರ್ಗಚಿಕಿತ್ಸಾ ಲಯವನ್ನು ತೆರೆದ ದಿನ ಅದು.

ನಿಸರ್ಗಚಿಕಿತ್ಸಾಲಯವನ್ನು ತೆರೆಯುತ್ತಾ ಗಾಂಧೀಜಿ ಹೀಗೆ ನುಡಿದರು: "ಚಿಕ್ಕಂದಿನಿಂದಲೂ ನನಗೆ ನಿಸರ್ಗಚಿಕಿತ್ಸೆಯ ಹುಚ್ಚಿತ್ತು. ನಿಸರ್ಗಚಿಕಿತ್ಸೆಯಲ್ಲಿ ದುಡಿಯಬೇಕೆಂಬುದು ನನ್ನ ಆಕಾಂಕ್ಷೆಯಾಗಿತ್ತು. ಆದರೆ, ಈ ವರೆಗೆ ಕೈಗೂಡ ಲಿಲ್ಲ. ಇತರ ಹಲವಾರು ತಾಪತ್ರಯಗಳು ನನ್ನ ಸಮಯವನ್ನೆಲ್ಲಾ ತಿಂದುವು. ಇಂದು ಪರಮಾತ್ಮನೇ ಶಕ್ತಿ ಒದಗಿಸಿದುದರಿಂದ ಸ್ವೀಕರಿಸಿಕೊಂಡೆ."

ಗಾಂಧೀಜಿಗೆ ಪ್ರಕೃತಿಯ ಕಡೆಗೆ ಸಹಜವಾದ ಒಲವು. ಪೇಟೆ ಪಟ್ಟಣಗಳ ಕೃತಕ ಬಿಸಿವಾತಾವರಣವು ಇದಕ್ಕೆ ಗೊಬ್ಬರವಿಟ್ಟಿತು. ಅವರು ಇಂಗ್ಲೆಂಡಿನಲ್ಲಿದ್ದಾಗ ಒಮ್ಮೆ ಪ್ಲೂರಸಿ (ಹೃತ್ಕೋಶ ಬೀಗುವುದು) ಬಂತು. ಇಂಗ್ಲೆಂಡು ಆಧುನಿಕ ಔಷಧ ಗಳ ತವರೂರು. ಗಾಂಧೀಜಿಗೆ ಮದ್ದಿನಲ್ಲಿ ವಿಶ್ವಾಸವಿಲ್ಲ. ಪ್ರಾಕೃತಿಕ ವಿಧಾನ

ಗಳಿಂದಲೇ ರೋಗ ಗುಣವಾಗಬೇಕೆಂದು ಅವರ ನಂಬುಗೆ. ಪ್ರಾಕೃತಿಕ ವಿಧಾನಗಳು ಈ ರಾಷ್ಟ್ರದಲ್ಲಿ ಹೇಗೆ ಸಿಗಬೇಕು? ಎಲ್ಲಿ ನೋಡಿದರೂ ಕೆಂಪಾಗಿ ಕೃತಕವೇ ಕಣ್ಣುಕಟ್ಟುವಂತಿತ್ತು. ಅಲ್ಲಿ ಗಾಂಧೀಜಿಯಂತಹ ಪ್ರಕೃತಿ ಜೀವಿ ಎಷ್ಟು ಕಷ್ಟಪಟ್ಟರಬೇಕೋ ನೀವೇ ಯೋಚಿಸಿರಿ. ನಡೆದರು, ಮಾರ್ಗದುದ್ದಕ್ಕೂ ನಡೆದರು. ಯಾರಾದರೂ ಇರುವರೇ ಎಂದು ವಿಚಾರಿಸಿದರು. ತಮ್ಮ 'ಪಾರ್ಟಿ'ಯ ಜನ ಒಬ್ಬನೂ ಸಿಕ್ಕಲಿಲ್ಲ. (ಒಂದು ಹುಳವೂ ಇಲ್ಲ) ಮತ್ತೂ ನೋಡಿದರು. ಅಷ್ಟರಲ್ಲಿ ಡಾ| ಎಲಿನ್‌ಸನ್‌ರ ಶಾಪು ದೊರೆಯಿತು. ಇವರು ಸಸ್ಯಾಹಾರಿ ವಾದಕ್ಕೆ ಸೇರಿದ ಡಾಕ್ಟರರು. ವೈದ್ಯಕೀಯ ಕಲಿತು ಪದವಿಗಿದವಿ ಎಲ್ಲಾ ಆಗಿ ಕೊನೆಗೆ ನಿಸರ್ಗಚಿಕಿತ್ಸೆಗೆ ತಿರುಗಿದವರು. ಚಾತಕಪಕ್ಷಿಗೆ ಮಳೆನೀರು ಉದುರಿದಂತಾಯಿತು ಗಾಂಧೀಜಿಗೆ. ಒಳಹೊಕ್ಕರು. ಏನೋ ಹಲಕೆಲವು ಸುಲಭ ವ್ಯಾಯಾಮ, ತಣ್ಣೀರು ಸ್ನಾನ, ಉತ್ತಮ ಉಸಿರಾಟ ಇತ್ಯಾದಿಗಳ ಉಪದೇಶವಾಯಿತು. ಅಂದಿನಿಂದ ನಿಸರ್ಗ ಚಿಕಿತ್ಸೆಯಲ್ಲಿ ದುಡಿಯುವುದಾಗಿ ಗಾಂಧೀಜಿ ನಿರ್ಧರಿಸಿಕೊಂಡರು. ಇಲ್ಲಿ ಗಾಂಧೀಜಿಗೆ ನಿಸರ್ಗಚಿಕಿತ್ಸೆಯ ಪರಿಣಯವಾಯಿತೆನ್ನಬಹುದು. ಡಾ|| ಎಲಿನ್‌ಸನ್ನರೇ ಈ ಪರಿಣಯದ ಪುರೋಹಿತ.

ಅನಂತರ ದೀರ್ಘಕಾಲದ ಮೇಲೆ ಉರುಲಿಕಾಂಚನದಲ್ಲಿ ನಿಸರ್ಗಚಿಕಿತ್ಸಾಲಯವು ತೆರೆಯಲ್ಪಟ್ಟಿತು.

ಉರುಲಿಕಾಂಚನದಲ್ಲಿ: ಗಾಂಧೀಜಿ ಸ್ಥಾಪಿಸಿದ ನಿಸರ್ಗಚಿಕಿತ್ಸಾಲಯವು ಉರುಲಿಕಾಂಚನದಲ್ಲಿ ಇಂದಿಗೂ ನಡೆಯುತ್ತಿದೆ. ಪೂನಾ–ಸೊಲ್ಲಾಪುರ ಮಾರ್ಗದಲ್ಲಿ ಪೂನಾದಿಂದ ಹತ್ತು ಮೈಲು ದೂರದಲ್ಲಿದೆ ಈ ಹಳ್ಳಿ. ಸುಮಾರು ಐದು ಸಾವಿರ ಜನಸಂಖ್ಯೆ. ವಿಶಾಲವಾದ ಪ್ರಕೃತಿ ಸೌಂದರ್ಯಗಳ ಹಸನಾದ ಮೈದಾನ. ಪಂಚಭೂತಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇಲ್ಲಿ. ಊರ ಪರವೂರ ಮಂದಿಗಳು ಚಿಕಿತ್ಸೆಗಾಗಿ ಬಂದುಹೋಗುತ್ತಿದ್ದಾರೆ. ಇಲ್ಲಿ ಯಾವ ವಿಧದ ಔಷಧಿಯನ್ನೂ ಉಪಯೋಗ ಮಾಡುವುದಿಲ್ಲ. ಬರೇ ಮಣ್ಣು, ನೀರು, ವಾಯು, ಬಿಸಿಲು, ಆಕಾಶ ಮತ್ತು ಆಹಾರ ಇವಿಷ್ಟೇ ವಿಧಾನಗಳಿಂದ ಸಕಲ ರೋಗಗಳಿಗೂ ಚಿಕಿತ್ಸೆ ಕೊಡಲಾಗುತ್ತದೆ. ರೋಗಿಗಳ ಖರ್ಚು ವೆಚ್ಚಗಳನ್ನು ಅವರವರೇ ನೋಡಿಕೊಳ್ಳಬೇಕು. ಶೀತ, ನೆಗಡಿ, ಕೆಮ್ಮುಗಳಿಂದ ತೊಡಗಿ ಪಾಂಡುರೋಗ, ಕ್ಷಯ, ಮೂಲವ್ಯಾಧಿ, ವಾತ ಇತ್ಯಾದಿ ಮಹಾರೋಗಗಳಿಗೂ ನೂರಾರು ಜನ ಇಲ್ಲಿಂದ ಚಿಕಿತ್ಸೆಪಡೆದು ಹೋಗಿದ್ದಾರೆ. ಅಂತಹವರಿಗೆ ಅದೊಂದು ಆಸ್ಪತ್ರೆಯಲ್ಲ, ದೇವಸ್ಥಾನವೆನ್ನಬಹುದು. ಈಗೀಗ ಇದೊಂದು ಯಾತ್ರಾಸ್ಥಳವೂ ಆಗುತ್ತಿದೆ. ಇದಕ್ಕೆ ಮಹಾತ್ಮರ ಹೆಸರು ಅಂಟಿರುವುದರಿಂದಲೇ ಅಷ್ಟು ಪವಿತ್ರತೆ.

ಅಂಟು ರೋಗ: ನಿಸರ್ಗ ಚಿಕಿತ್ಸೆ ಒಂದು "ಅಂಟು ರೋಗ"ದಂತೆ. ಗಾಂಧೀಜಿಯವರು ನಿಸರ್ಗಚಿಕಿತ್ಸೆಯ ಕಡೆಗೆ ಒಲಿದುದು ಎಡೋಲ್ಫ್ ಜಸ್ಟರವರ

ಪುಸ್ತಕದಿಂದ. ಎಡೋಲ್ಫ್ ಜಸ್ಟರವರು ಜರ್ಮನರು. ಅವರು ಈ ಚಿಕಿತ್ಸೆಯಲ್ಲಿ ಬಹಳ ಅಭಿವೃದ್ಧಿಯನ್ನು ತಂದವರು. ಅವರ "ಪ್ರಕೃತಿಗೆ ತಿರುಗು" ("Return to Nature") ಎಂಬ ಪುಸ್ತಕ ಆಕಸ್ಮಾತ್ ಒಂದು ದಿನ ಗಾಂಧೀಜಿಯವರ ಕೈಗೆ ಬಂತು. ಅಂದಿನಿಂದಲೇ ಅವರಿಗೂ ಈ 'ಹುಚ್ಚು' ಪ್ರಾರಂಭವಾಯಿತು.

ಮದ್ದಿಗಿಂತ ಮಣ್ಣು ಉತ್ತಮ: ಜಸ್ಟರವರು ಮಣ್ಣಿನ ಚಿಕಿತ್ಸೆಯನ್ನು ಬಹಳವಾಗಿ ಒತ್ತಿ ಹೇಳಿದ್ದಾರೆ. ಪರೀಕ್ಷೆಮಾಡಬೇಕೆನಿಸಿತು ಗಾಂಧೀಜಿಗೆ. ಗಾಂಧೀಜಿಗೆ ಆರೋಗ್ಯ ಕೆಟ್ಟಿತ್ತು. ಅವರೇ ಹೇಳುವಂತೆ "೧೯೦೧ರ ವರೆಗೆ ನಾನು ಕಾಯಿಲೆ ಬಿದ್ದಾಗಲೆಲ್ಲ ಡಾಕ್ಟರರ ಬಳಿಗೆ ಓಡದಿದ್ದರೂ ಅವರ ಔಷಧಗಳನ್ನು ಕೆಲವುಟ್ಟಿಗೆ ಉಪಯೋಗಿಸುತ್ತಿದ್ದೆ. ಮಲಬದ್ಧತೆಯಾದಾಗ ಭೇದಿಉಪ್ಪನ್ನು ತೆಗೆದುಕೊಳ್ಳುತ್ತಿದ್ದೆ. ದಿವಂಗತ ಡಾ॥ ಪ್ರಾಣಜೀವನ ಮೆಹತಾ ನೈತಾಲಿಗೆ ಬಂದಿದ್ದರು. ನನಗೆ ಪದೇ ಪದೇ ಆಗುತ್ತಿದ್ದ ನಿತ್ರಾಣ, ಬಳಲಿಕೆಗಳನ್ನು ಗುಣಮಾಡಲು ಕೆಲವು ಔಷಧಿಗಳನ್ನು ಸೂಚಿಸಿದರು. ಇದರಿಂದಾಗಿ ನಾನು ಮದ್ದಿನ ಸಾಹಿತ್ಯವನ್ನು ತುಸು ಓದಬೇಕಾಯಿತು. ಸಾಲದುದಕ್ಕೆ ನೈತಾಲಿನ ಆಸ್ಪತ್ರೆಯೊಂದರಲ್ಲಿ ಕೆಲವು ಕಾಲ ದುಡಿದು ಅನುಭವವು ಇತ್ತು. ಈ ಎಲ್ಲವುಗಳ ಸಹಾಯದಿಂದ ಕೆಲವು ಸಮಯ ಹೇಗೂ ದೂಡಿದೆ. ಆದರೆ ಯಾವ ಔಷಧಿಯೂ ಒಂದಿಷ್ಟೂ ಗುಣ ಕೊಡಲಿಲ್ಲ. ತಲೆನೋವೂ, ಸಾಮಾನ್ಯ ಅನಾರೋಗ್ಯವೂ ಹಾಗೆಯೇ ಉಳಿದುವು. ಇದರಿಂದ ಔಷಧಿಗಳಲ್ಲಿ ನನಗಿದ್ದ ಅಲ್ಪಸ್ವಲ್ಪ ನಂಬುಗೆಯೂ ಮಾಯವಾಗತೊಡಗಿತು." ಆ ಸಮಯದಲ್ಲಿ ಗಾಂಧೀಜಿಯವರು ಜಸ್ಟರವರ ಪುಸ್ತಕ ಓದಿದರು. ಮಲಬದ್ಧತೆಗೆ ಕಿಬ್ಬೊಟ್ಟೆಯ ಮೇಲೆ ಮಣ್ಣಿನ ರೊಟ್ಟಿಯನ್ನು ಕಟ್ಟಬೇಕೆಂದು ಜಸ್ಟ್ ಹೇಳುತ್ತಾನೆ. "ನಾನು ಶುದ್ಧವಾದ ಒಣಮಣ್ಣಿನ ಹುಡಿಯನ್ನು ನೀರಿನೊಂದಿಗೆ ಬೆರಸಿ ತೆಳುವಾದ ಬಟ್ಟೆಯಲ್ಲಿಟ್ಟು ಕಿಬ್ಬೊಟ್ಟೆಗೆ ಕಟ್ಟಿಕೊಂಡು ಮಲಗಿ, ರಾತ್ರೆ ಎಚ್ಚರವಾದಾಗ, ಅದನ್ನು ಬಿಡಿಸಿ ಬೇರೊಂದು ರೊಟ್ಟಿ ಬದಲಾಯಿಸುತ್ತಿದ್ದೆ. ಇದರ ಪರಿಣಾಮ ಆಶ್ಚರ್ಯಕರವಾಗಿತ್ತು. ಮಾರನೆ ದಿನವೇ ಬೆಳಗ್ಗೆ ನನಗೆ ಸಹಜವಾಗಿಯೂ ತೃಪ್ತಿಕರವಾಗಿಯೂ ಮಲಶೋಧನೆಯಾಯಿತು. ಅಂದಿನಿಂದ ನಾನು ಭೇದಿ ಉಪ್ಪನ್ನು ಮುಟ್ಟಿಯೇ ಇಲ್ಲವೆನ್ನಬಹುದು" ಎಂದು ಗಾಂಧೀಜಿ ಹೇಳಿರುವರು.

ಲೂಯಿ ಖೂನೆ (Louis Kuhne): ಗಾಂಧೀಜಿಯ ಒಳಗಡೆ ಏನೋ ತುಸು ಸಂದೇಹ ಸೇರಿದ್ದಿತಾದರೆ ಲೂಯಿ ಖೂನೆಯವರ ಪುಸ್ತಕವು ಗಾಂಧೀಜಿಯವರನ್ನು ಸಂಪೂರ್ಣವಾಗಿ ತಿರುಗಿಸಿ ಬಿಟ್ಟಿತು. "ಖೂನೆ, ಜಸ್ಟ್ ಮೊದಲಾದವರ ಬರಹಗಳು ಸರಳವೂ ಜನಪ್ರೀತವೂ ಆಗಿವೆ. ಅವು ಬಹಳ ಪ್ರಯೋಜನ ಉಳ್ಳವುಗಳು. ಅವುಗಳನ್ನೋದುವುದು ಎಲ್ಲರ ಕರ್ತವ್ಯ. ಈ ಪುಸ್ತಕಗಳನ್ನೂ ಓದಿದಂದಿನಿಂದ ನಾನು ನಿಸರ್ಗ ಚಿಕಿತ್ಸೆಗೆ ಸಂಪೂರ್ಣವಾಗಿ ಮತಾಂತರ ಹೊಂದಿದೆ. ಇದು

೩೦ ವರ್ಷಗಳ ಹಿಂದೆ" ಎಂದು ಗಾಂಧೀಜಿ ನುಡಿದಿದ್ದಾರೆ. ಖೂನೆಯವರು ನಿಸರ್ಗ ಚಿಕಿತ್ಸೆಯ ತಾತನೆಂದು ಗಣಿಸಲ್ಪಡುತ್ತಾರೆ.

ಖೂನೆಯವರೂ ಜರ್ಮನಿಯವರು. ೧೯ನೇ ಶತಮಾನದವರು. ನಿಸರ್ಗ ಚಿಕಿತ್ಸೆಯು ನಮ್ಮ ವೇದಾಂತದ ರೂಪದಲ್ಲಿ ಅನಾದಿಯಿಂದಲೇ ಬಂದಿದೆಯೆಂಬುದನ್ನು ಬಿಟ್ಟರೆ ಅದಕ್ಕೆ ಸರಿಯಾದ ರೂಪಕೊಟ್ಟು, ವೈಜ್ಞಾನಿಕ ಬಣ್ಣ ಬಳಿದು ಒಂದು ಸಿಶ್ಚಿತ ಚಿಕಿತ್ಸಾವಿಧಾನವನ್ನಾಗಿ ಮಾಡಿದವರು ಲೂಯಿ ಖೂನೆ. ಅವರಿಂದಲೇ ನಿಸರ್ಗಚಿಕಿತ್ಸೆಯು ಇಡೀ ವಿಶ್ವಕ್ಕೆ ಹರಡುವಂತಾಯಿತು. ಅವರ ಚಿಕಿತ್ಸಾಲಯವು ವಿಶ್ವಖ್ಯಾತಿ ಪಡೆದಿತ್ತು. ಇಂದು ಅವರ ಅನುಯಾಯಿಗಳಿಲ್ಲದ ರಾಷ್ಟ್ರವಿಲ್ಲ. ಖೂನೆಯವರ ಪುಸ್ತಕವು ಜಗತ್ತಿನ ೬೦ಕ್ಕೂ ಮಿಕ್ಕಿ ಭಾಷೆಗಳಿಗೆ ಭಾಷಾಂತರವಾಗಿದೆ.

ಸರದಾರರಿಗೂ ಪ್ರಸಾದ: ನಿಸರ್ಗಚಿಕಿತ್ಸೆಯು ತನಗೆ ದೇವರೇ ಕೊಟ್ಟ ಪ್ರಸಾದವೆಂದು ಗಾಂಧೀಜಿ ತಿಳಿಯುತ್ತಿದ್ದರು. ಅದನ್ನು ಸರದಾರ ಪಟೇಲರಿಗೂ ಕೊಂಚ ಕೊಟ್ಟರು. ಪಟೇಲರಿಗೊಮ್ಮೆ ದೀರ್ಘ ಸೆರೆಮನೆಯ ವಾಸದಿಂದ ಹೊರ ಬಂದಾಗ ಬಹಳ ಕಾಯಿಲೆಯಾಯಿತು. ಅವರ ಮೇಲೆ ಕಠಿಣವಾದೊಂದು ಶಸ್ತ್ರ ಚಿಕಿತ್ಸೆ ನಡೆಸುವ ಅಗತ್ಯವಿದೆಯೆಂದು ಡಾಕ್ಟರರು ಅಭಿಪ್ರಾಯ ಪಟ್ಟರು. ಶಸ್ತ್ರ ಚಿಕಿತ್ಸೆಯ ಅಪಾಯ ಗಾಂಧೀಜಿಗೆ ಗೊತ್ತು. ಏನು ಬಂದರೂ ನಿಸರ್ಗಚಿಕಿತ್ಸೆಯೊಂದೇ ಮಾಡತಕ್ಕ ಮದ್ದು ಎಂದು ಗಾಂಧೀಜಿಯ ವಿಶ್ವಾಸ. ಶಸ್ತ್ರಚಿಕಿತ್ಸೆಯ ಗಂಡಾಂತರವನ್ನೂ ನಿಸರ್ಗಚಿಕಿತ್ಸೆಯ ಲಾಭಗಳನ್ನೂ ಪಟೇಲರಿಗೆ ವಿವರಿಸಿದರು. ಸರದಾರರಿಗೂ ಹೌದೆನಿಸಿತು. ಒಡನೆ ಈರ್ವರೂ ಪೂನಾದ ಡಾ|| ದಿನ್‌ಶಾ ಮೆಹತಾರವರ ನಿಸರ್ಗಚಿಕಿತ್ಸಾಲಯಕ್ಕೆ ಬಂದರು. ಗಾಂಧೀಜಿ ಸ್ವತಃ ಡಾಕ್ಟರರಾದರು. ಕೆಲವು ದಿನ ತಾವೇ ಚಿಕಿತ್ಸೆ ನಡೆಸಿದರು. ಸುಮಾರು ಮೂರು ತಿಂಗಳ ಕಾಲದಲ್ಲಿ ಪಟೇಲರಿಗೆ ಸುಖವಾಯಿತು. ಗಾಂಧೀಜಿಯ ಪ್ರಯೋಗವು ಸಫಲವಾಯಿತು. ಇಂತಹ ಜೀವಂತ ಪ್ರಯೋಗಗಳು ನೂರಾರು ನಡೆದಿವೆ. ಗಾಂಧೀಜಿ ಏನನ್ನೂ ನುಡಿವವರಲ್ಲ. ಎಲ್ಲವೂ ಅನುಭವದ ಒರೆಗಲ್ಲಿನಿಂದ ಹೊರಡಬೇಕು.

ಗಾಂಧೀಜಿಯ ಯಾವ ಪ್ರಯೋಗ ಪರೀಕ್ಷೆಗೂ ಮೂಲದಲ್ಲಿ ಅವರಲ್ಲಿರುವ ಸೇವಾಸಕ್ತಿಯೇ ಬೀಜ. ಸೇವೆಯಿಲ್ಲದ ಕಾರ್ಯ ಅವರಿಗೆ ತಿರುಳಿಲ್ಲದ ಹೊಟ್ಟು. ನಿಸರ್ಗಚಿಕಿತ್ಸೆಯಾದರೂ ಅವರ ಮನ ಒಲಿಸಲು ಇದೊಂದು ಮುಖ್ಯ ಕಾರಣ. "ಮಿಲಿಯಾಂತರ ಜನರಿಗೆ ಸಿಗಲಾರದ ಅನುಕೂಲತೆಗಳನ್ನು ನಾವು ಕೆಲವರು ಮಾತ್ರ ಏಕೆ ಅನುಭವಿಸಬೇಕು?" ಎಂದು ಅವರು ವೈದ್ಯಕೀಯದ ಭಾರಿ ಕ್ರಯದ ಔಷಧಗಳನ್ನೂ ಹತ್ಯಾರುಗಳನ್ನೂ ಕುರಿತಾಗಿ ಹೇಳಿದರು. ನಿಸರ್ಗಚಿಕಿತ್ಸೆಗೆ ಅವಶ್ಯಕ ವಸ್ತುಗಳೆಂದರೆ ನಿಸರ್ಗದಲ್ಲಿ ಹೇರಳವಾಗಿ ದೊರೆಯುವ ಮಣ್ಣು, ನೀರು, ಗಾಳಿ, ಬಿಸಿಲು ಮಾತ್ರ. ಅತಿ ಬೆಲೆಯ ಔಷಧ ಇಂಜೆಕ್ಷನುಗಳ ಅವಶ್ಯಕತೆಯಿಲ್ಲ. ನಾನಾ ಯಂತ್ರೋಪಕರಣಗಳ ಕಷ್ಟವಿಲ್ಲ. ರೋಗ ಪರೀಕ್ಷೆಯ

ಕಾಳಜಿಯಿಲ್ಲ. ಬಲುದೂರದ ಪೇಟೆಪಟ್ಟಣಗಳ ಆಸ್ಪತ್ರೆಗಳಲ್ಲಿ ನಕಳಬೇಕಾಗಿಲ್ಲ. ಅವರವರ ವಾಸಸ್ಥಾನದಲ್ಲೇ ಇದ್ದುಕೊಂಡು, ಪಂಚಭೂತಗಳ ಯೋಗ್ಯ ಸಂಯೋಜನೆಯಿಂದ ಇದನ್ನು ಮಾಡಿಕೊಳ್ಳಲು ಸಾಧ್ಯವಿದೆ. ಆದ್ದರಿಂದಲೇ ಗಾಂಧೀಜಿ ಅದರ ಪ್ರಚಾರಕ್ಕೆ ಮನಮಾಡಿದರು.

ಆರೋಗ್ಯಶಾಸ್ತ್ರ ಸಕಲರಿಗೂ ಎಟಕುವಂತಿರಬೇಕು: ಆರೋಗ್ಯಶಾಸ್ತ್ರವು ಎಲ್ಲರಿಗೂ ಆಲೋಚನೆಗೆ ನಿಲುಕುವಂಥಾದ್ದಾಗಿರಬೇಕು ಅದು ಮಾತ್ರ ಆ ಶಾಸ್ತ್ರದ ಸತ್ಯತೆಯನ್ನು ತೋರಿಸುತ್ತದೆ. ಪರಮಾತ್ಮನು ಯಾರನ್ನೂ ಪರಾವಲಂಬಿಯಾಗಿ ನಿರ್ಮಿಸಿಲ್ಲ. ಆದ್ದರಿಂದ ಆರೋಗ್ಯಕ್ಕಾಗಿ ಯಾರೂ ಪರಾವಲಂಬಿಗಳಾಗುವ ಆವಶ್ಯಕತೆಯಿಲ್ಲ. ಆರೋಗ್ಯವು ಕೇವಲ ಹಣವುಳ್ಳವರಿಗೆ ಅಥವಾ ವಿದ್ಯೆಯುಳ್ಳವರಿಗೆ ಮಾತ್ರ ದೊರಕುವಂಥಾದ್ದಾಗಿಗಲು ಸಾಧ್ಯವಿಲ್ಲ. ಆದರೆ, ಇಂದಿನ ವೈದ್ಯಶಾಸ್ತ್ರವು ಇಲ್ಲಿಗೆ ಮುಟ್ಟಿದೆ. ಅದು ಬಡವರಿಗೂ ಅವಿದ್ಯಾವಂತರಿಗೂ ದೊರೆಯುವುದಿಲ್ಲ. ಅದು ನಿಸರ್ಗಚಿಕಿತ್ಸೆಯಲ್ಲಿ ಮಾತ್ರವೇ ಸಾಧ್ಯ. ನಿಜವಾದ ಆರೋಗ್ಯಶಾಸ್ತ್ರ ಹಾಗೇ ಇರಬೇಕು. ಹೇರಳವಾಗಿ ನಿಸರ್ಗದಲ್ಲಿ ಹಬ್ಬಿರುವ ಪಂಚಶಕ್ತಿಗಳೇ ನಿಜವಾದ ಔಷಧಿಗಳು. ಗಾಂಧೀಜಿ ಈ ವಾದಸರಣಿಯನ್ನು ಮೆಚ್ಚಿದರು. ಆದರೆ ಅಷ್ಟರಲ್ಲೇ ಕುಶಲಮತಿ ಡಾಕ್ಟರರೊಬ್ಬರು "ಡಾಕ್ಟರರು ಕೊಡುವ ಔಷಧಿಗಳಾದರೂ ಪಂಚಭೂತಗಳ ಸಮ್ಮಿಳನದಿಂದಲೇ ತಯಾರಾದುದಷ್ಟೆ?" ಎಂಬುದಾಗಿ ಪ್ರಶ್ನಿಸದೆ ಬಿಡಲಿಲ್ಲ. ಗಾಂಧೀಜಿ ಹೀಗೆ ಉತ್ತರಿಸಿದರು: "ಈ ದೃಷ್ಟಿಯಿಂದ ಎಲ್ಲವನ್ನೂ ಪ್ರಾಕೃತಿಕವೆಂದೇ ವಾದಿಸಬಹುದು. ನಾನು ಹೇಳುವುದಿಷ್ಟೇ. ರಾಮನಾಮಕ್ಕಿಂತ ಹೊರಗಿನದೆಲ್ಲವೂ ನಿಸರ್ಗಚಿಕಿತ್ಸೆಗೆ ವಿರೋಧವಾದುದು. ಈ ಕೇಂದ್ರ ತತ್ವದಿಂದ ಒಬ್ಬನು ದೂರ ಸರಿದಷ್ಟೂ ಅವನು ನಿಸರ್ಗಚಿಕಿತ್ಸೆಯಿಂದಲೂ ಅಷ್ಟೇ ದೂರ ಸರಿಯುತ್ತಾನೆ. ಈ ವಾದವನ್ನನುಸರಿಸಿದರೆ ಪಂಚಮಹಾಭೂತದ ಐದು ವಸ್ತುಗಳ ಉಪಯೋಗವೇ ನಿಸರ್ಗಚಿಕಿತ್ಸೆಯ ಪರಿಮಿತಿಯೆಂದು ಹೇಳಬಹುದು." ಆದ್ದರಿಂದ ಔಷಧಿಗಳೂ ಪ್ರಾಕೃತಿಕವೆಂಬ ವಾದದಲ್ಲಿ ಹುರುಳಿಲ್ಲ. ಪಂಚಭೂತಗಳು ಹೇಗೆ ನಿರ್ಮಿಸಲ್ಪಟ್ಟಿರುವುವೋ ಅದೇ ರೂಪದಲ್ಲಿ ಅವನ್ನು ಉಪಯೋಗಿಸತಕ್ಕದ್ದು. ಮಣ್ಣು, ನೀರು, ಗಾಳಿ, ಬಿಸಿಲು, ಆಕಾಶಗಳು ಪರಮಾತ್ಮನೇ ನಿರ್ಮಿಸಿದ ಔಷಧಿಗಳು. ಅದಕ್ಕಿಂತ ಮಿಗಿಲಾದ ಔಷಧಿಗಳನ್ನು ನಾವು ತಯಾರಿಸುವುದು ಸಾಧ್ಯವಲ್ಲ.

ಸಾಮಾನ್ಯ ಚಿಕಿತ್ಸಕರೇ ಮೇಲು: ಚಿಕ್ಕಂದಿನಲ್ಲಿ ಗಾಂಧೀಜಿಗೆ ವೈದ್ಯಕೀಯವೃತ್ತಿಯ ಮೇಲೆ ತುಂಬಾ ಅಭಿಮಾನವಿತ್ತು. ದೇಶಕ್ಕಾಗಿ ತಾನೊಬ್ಬ ಡಾಕ್ಟರನಾಗಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಆದರೆ, ಅನಂತರ ಇದೇ ಅಭಿಲಾಷೆ ಬೆಳೆದಂತೆ ತೋರುವುದಿಲ್ಲ. ಕೊನೆಕೊನೆಗೆ ವೈದ್ಯಕೀಯ ವೃತ್ತಿಯ ಮೇಲೆ ಅವರಿಗೆ ಒಂದು ತೆರನಾದ ಜಿಗುಪ್ಸೆಯೇ ಹುಟ್ಟಿತೆನ್ನಬಹುದು. ಆಸ್ಪತ್ರೆ

ಗಳನ್ನೂ ಡಾಕ್ಟರರನ್ನೂ ಅವರು ಒಂದೆರಡು ಬಾರಿ ಕಠೋರ ಮಾತುಗಳಿಂದ ಖಂಡಿಸಿದ್ದಾರೆ. ವೈದ್ಯಶಾಸ್ತ್ರವು ಜನತೆಗೆ ನಿಜವಾಗಿಯೂ ಸೇವೆಸಲ್ಲಿಸುವುದಿಲ್ಲ ವೆಂದು ಅವರು ಆರೋಪಿಸಿದ್ದಾರೆ. ವೈದ್ಯಶಾಸ್ತ್ರದ ಪ್ರಕೃತಿಯೇ ಹಾಗೆ ಎನ್ನು ತ್ತಾರೆ ಅವರು.

"ಡಾಕ್ಟರರು ನಮ್ಮನ್ನು ಬಹಳ ಮಟ್ಟಿಗೆ ನಿಸ್ಸಹಾಯಕರನ್ನಾಗಿ ಮಾಡಿರು ತ್ತಾರೆ. ಕೆಲವು ಬಾರಿ ದೊಡ್ಡ ದೊಡ್ಡ ಪದವೀಧರ ಡಾಕ್ಟರರಿಗಿಂತಲೂ ಸಾಮಾನ್ಯ ಚಿಕಿತ್ಸಕರೇ ಮೇಲೆಂದು ನನಗೆ ತೋರುತ್ತದೆ" ಎಂದರು.

"ಯೋಚಿಸೋಣ. ಡಾಕ್ಟರರು ಏನು ಮಾಡುತ್ತಾರೆಂಬುದನ್ನು ನೋಡೋಣ. ನಾನು ಅತಿಯಾಗಿ ತಿನ್ನುತ್ತೇನೆ, ನನಗೆ ರೋಗ ಬರುತ್ತದೆ, ಡಾಕ್ಟರರೊಬ್ಬರು ನನ್ನನ್ನು ಗುಣಮಾಡುತ್ತಾರೆ. ಆಗ ನಾನು ಪುನಃ ಅತಿಯಾಗಿ ತಿನ್ನತೊಡಗುತ್ತೇನೆ. ಪುನಃ ರೋಗಗ್ರಸ್ಥನಾಗುತ್ತೇನೆ. ಡಾಕ್ಟರರು ಬಾರದಿರುತ್ತಿದ್ದರೆ ನಿಸರ್ಗವು ತನ್ನ ಕಾರ್ಯಮಾಡಿ ಮುಗಿಸುತಿತ್ತು; ನನ್ನ ತಪ್ಪಿಗೆ ತಕ್ಕ ಶಾಸ್ತಿಯಾಗಿ ಮುಂದೆ ನಾನು ತಿದ್ದಿಕೊಳ್ಳುವಂತಾಗುತಿತ್ತು; ನಾನು ಸುಖಹೊಂದಬಹುದಿತ್ತು. ಡಾಕ್ಟರರು ನಮ್ಮಲ್ಲಿ ಈ ರೀತಿಯಲ್ಲಿ ದುರಾಚಾರಗಳನ್ನು ಪ್ರೋತ್ಸಾಹಿಸುತ್ತಾರೆ."

ಗಾಂಧೀಜಿ ಹೇಳಿದುದು ಸತ್ಯ. ಇದಕ್ಕೆ ಪಂಡಿತ ಪಾಮರರೆನ್ನದೆ ಅನೇಕ ಮಂದಿಯ ಅನುಭವಗಳೇ ಸಾಕ್ಷಿ. ಡಾ॥ ಫೀಲ್ಡಿಂಗ್ ಓಲ್ಡ್, M. D., M. R. C. P., M. A., ಇವರು ೧೯೫೨ರಲ್ಲಿ "ವೈದ್ಯಶಾಸ್ತ್ರವು ವೈಜ್ಞಾನಿಕವೆಂಬುದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ರೋಗವೆಂದರೇನೆಂಬುದು ಕೂಡಾ ವೈದ್ಯಶಾಸ್ತ್ರಕ್ಕೆ ತಿಳಿದಿಲ್ಲವೆನ್ನಬೇಕಾಗುತ್ತದೆ. ಇಂದು ನಾವು, ಡಾಕ್ಟರರು, ನಮ್ಮ ಸಂಪೂರ್ಣ ತತ್ವಗಳನ್ನು ಪುನರ್ವಿಮರ್ಶಿಸಬೇಕಾಗಿ ಬಂದಿದೆ. ಡಾಕ್ಟರರು ಗುಣ ಮಾಡುವುದೆಂದು ಹೇಳಬಹುದಾದ ಏನನ್ನೂ ಮಾಡುವುದಿಲ್ಲ, ಬದಲಾಗಿ ರೋಗ ವನ್ನು ಬೆಳೆಸುತ್ತಾರೆ. ಕೇವಲ ಶೀತಬಾಧೆಗೆ ಅವರ ಆಸರೆ ಪಡೆದರೆ ಪ್ಲೂರಸಿ, ನ್ಯುಮೋನಿಯಾಗಳಂತಹ ಭಯಂಕರಸ್ಥಿತಿಗೆ ಮುಟ್ಟಿಸುತ್ತಾರೆ. ವಾತ, ಅಸ್ತ್ಮಾ, ಇತ್ಯಾದಿ "ಅಪರಿಹಾರ್ಯ" ರೋಗಗಳನ್ನು ನಿಸರ್ಗಚಿಕಿತ್ಸೆಯಲ್ಲಿ ಸುಲಭವಾಗಿ ಗುಣ ಪಡಿಸಲು ಸಾಧ್ಯವಾಗಿದೆ. ನಿಜ ಹೇಳುವುದಾದರೆ ಕಲ್ಮಶ ಸಂಗ್ರಹಣವೇ ರೋಗ, ಅದರ ವಿಸರ್ಜನೆಯೇ ಚಿಕಿತ್ಸೆ. ನಾವು ಮಾನಸಿಕ ಮತ್ತು ಕಾಯಿಕ ಪರಿಶುದ್ಧತೆ ಯಲ್ಲಿದ್ದಾಗ ಯಾವ ರೋಗವೂ ಇಲ್ಲ ..." ಎಂದು ಲಂಡನಿನಲ್ಲಿ ಭಾಷಣಮಾಡಿದರು.

ಪ್ಯಾರೀಸಿನ ಪ್ರಖ್ಯಾತ ಡಾ॥ ಮೆಜೆಂಡಿಯವರು 'Medicine is a great humbug. I know it is called science. Science, indeed! It is nothing like science. Doctors are merely emperics when they are not charlatnas..." ಔಷಧಿಯು ಒಂದು ಮಹಾ ಮೋಸ. ಅದು ವೈಜ್ಞಾನಿಕವೆಂದು ಕರೆಯಲ್ಪಡುವುದು ನನಗೆ ಗೊತ್ತಿದೆ. ವಿಜ್ಞಾನ, ಖಂಡಿತ

ವಾಗಿಯೂ! ವಿಜ್ಞಾನದ ಯಾವ ಲಕ್ಷಣವೂ ಅದಕ್ಕಿಲ್ಲ. ಡಾಕ್ಟರರು ಕೇವಲ ಮಾತಿನ ಮಲ್ಲರು. ಅಲ್ಲವಾದರೆ ಬರೇ ಆಳಲೇಕಾಯಿ ಪಂಡಿತರು...." ಎಂಬುದಾಗಿ ಸಾರಿದರು.

ಡಾ|| ಜೇಮ್ಸ್ ಜೋನ್‌ಸನ್ನರು "ನನ್ನ ಹೃದಯವಾಣಿ ಹೇಳುತ್ತಿದೆ, ಇಂದು ಲೋಕದಲ್ಲಿ ಒಬ್ಬನೇ ಒಬ್ಬ ಡಾಕ್ಟರನಾಗಲೀ, ಒಂದೇ ಒಂದು ಔಷಧಿಯಾಗಲೀ ಇಲ್ಲದಿರುತ್ತಿದ್ದರೆ ಜನರು ಈಗ ಇರುವುದಕ್ಕಿಂತ ಹೆಚ್ಚಿನ ಸುಖದಲ್ಲಿರುತ್ತಿದ್ದರು" ಎಂದರು.

ವೈದ್ಯಶಾಸ್ತ್ರದ ತಾತನೆಂದು ಡಾಕ್ಟರರು ಹೇಳುವ ಹಿಪೋಕ್ರೇಟ್ಸರೇ "ನಿಸರ್ಗವೇ ಸರ್ವರೋಗ ಪರಿಹಾರಕ ಶಕ್ತಿ" ಎಂದು ಸಾರಿದ್ದಾರೆ.

ಅಮೇರಿಕದ ಡಾ|| ವೆಂಡೆಲ್ ಹೋಮ್ಸ್‌ರವರು "ನಮ್ಮಲ್ಲಿರುವ ಎಲ್ಲಾ ಔಷಧಿಗಳನ್ನು ಸಮುದ್ರಕ್ಕೆಸೆದರೆ ಅವು ಅಲ್ಲಿ ಮೀನುಗಳಿಗೂ ಉಪದ್ರ ಕೊಡದಿರಲಾರವು" ಎಂದು ಹೇಳಿ, ಮದ್ದುಗಳು ಮನುಷ್ಯರಿಗೆ ಮಾಡುವ ಅನಾಹುತಗಳನ್ನು ವಿವರಿಸಿದ್ದಾರೆ.

ಉರುಲಿಕಾಂಚನದಲ್ಲಿ ಚಿಕಿತ್ಸಾಲಯ ತೆರೆದು ಕೆಲವು ದಿನ ಗಾಂಧೀಜಿ ಸ್ವತಃ ನಿಂತು ಚಿಕಿತ್ಸೆ ನಡೆಸಿದರು. ದಿನಕ್ಕೆ ಮೂವತ್ತು ನಲ್ವತ್ತರಂತೆ ರೋಗಿಗಳು ಬರತೊಡಗಿದರು. ಗಾಂಧೀಜಿ ಎಲ್ಲರಿಗೂ ಸಾಮಾನ್ಯ ಹೆಚ್ಚುಕಡಮೆ ಒಂದೇ ರೀತಿಯ ಚಿಕಿತ್ಸೆ ಹೇಳುತ್ತಿದ್ದರು. ಮಣ್ಣು ಲೇಪ, ತಣ್ಣೀರು ಸ್ನಾನ (ಕಟಿ ಅಥವಾ ಸ್ಪರ್ಶ), ಸೂರ್ಯಸ್ನಾನ, ವಾಯು ವಿಹಾರ, ಆಕಾಶ ಚಿಕಿತ್ಸೆ, ಆಹಾರ ನಿಯಮ ಇವಿಷ್ಟನ್ನೆ ಅಲ್ಲಲ್ಲಿ ಕೊಂಚ ವ್ಯತ್ಯಾಸಮಾಡಿ ಹೇಳುತ್ತಿದ್ದರು.

ಅದ್ವೈತ ಸಿದ್ಧಾಂತ: ಒಂದೇ ಚಿಕಿತ್ಸೆಯಲ್ಲಿ ಗಾಂಧೀಜಿ ಹೇಗೆ ತರತರದ ರೋಗಿಗಳನ್ನು ಗುಣಮಾಡುತ್ತಿದ್ದರೆಂದು ಹಲವರಿಗೆ ಆಶ್ಚರ್ಯ. ಗಾಂಧೀಜಿ ಹೀಗೆ ವಿವರಿಸಿದರು: "ನಿಸರ್ಗಚಿಕಿತ್ಸೆಯಲ್ಲಿ ಹಲವಾರು ರೋಗಗಳೆಂಬುದಿಲ್ಲ. ದೇಹದೊಳಗೆ ಕಲ್ಮಶ ಸೇರುವುದೊಂದೇ ಮನುಷ್ಯನಿಗೆ ಬರುವಂತಹ ರೋಗ. ಕಲ್ಮಶವು ಸೇರಿದಂತಹ ಅಂಗ, ಕಾಲ, ರೋಗಿಯ ಶರೀರ ರಚನೆ ಇತ್ಯಾದಿಗಳನ್ನು ಹೊಂದಿಕೊಂಡು ಒಂದೇ ರೋಗವು ಭಿನ್ನಭಿನ್ನ ರೂಪಗಳಿಂದ ಕಾಣಿಸುತ್ತದೆ."

ಹಾಗಿದ್ದರೆ ನೆಗಡಿ, ಶೀತ, ಕ್ಷಯ, ವಾತ-ಇವೆಲ್ಲಾ ಒಂದೇ ರೋಗವೇ?

"ಇವೆಲ್ಲಾ ರೋಗಗಳಿಗೂ ಕಾರಣ ಒಂದೇ-ಕಲ್ಮಶ ಸಂಗ್ರಹಣ. ಆದ್ದರಿಂದ ಇವೆಲ್ಲಾ ರೋಗಗಳೂ ಒಂದೇ. ಕಲ್ಮಶವು ಅಲ್ಪವಾಗಿದ್ದು ಮೂಗಿನಲ್ಲಿ ಕಾಣಿಸಿದರೆ ನೆಗಡಿಯಾಯಿತು, ಶ್ವಾಸಕೋಶವನ್ನು ಕಲ್ಮಶ ಪ್ರವೇಶಿಸಿದಾಗ ಕ್ಷಯವಾಯಿತು; ಅದೇ ಕಲ್ಮಶವು ಗಂಟುಗಳನ್ನು ಬಾಧಿಸಿದರೆ ವಾತವಾಯಿತು. ಆದುದರಿಂದ ಅಂತಹ ಕಲ್ಮಶವನ್ನು ದೇಹದಿಂದ ಹೊರಹಾಕಿದಾಗ ಶೀತವೂ, ಕ್ಷಯವೂ, ವಾತವೂ ಎಲ್ಲವೂ ಗುಣವಾಯಿತು."

ಕಲ್ಮಶವೇ ರೋಗದ ಕಾರಣವಾದ್ದರಿಂದ ಅದನ್ನು ವಿಸರ್ಜಿಸುವುದೇ ರೋಗಕ್ಕೆ ತಕ್ಕ ಚಿಕಿತ್ಸೆ. ನಿಸರ್ಗ ಚಿಕಿತ್ಸೆಯು ಮಾಡುವುದಾದರೂ ಇದನ್ನೇ. ಮಣ್ಣು, ನೀರು, ವಾಯು, ಉಪವಾಸ ಇತ್ಯಾದಿಗಳು ಕಲ್ಮಶವನ್ನು ಹೊರಹಾಕಲು ತುಂಬಾ ಶಕ್ತಿಯುಳ್ಳವುಗಳು. ಆದ್ದರಿಂದಲೇ ಯಾವುದೇ ರೋಗವಾಗಿದ್ದರೂ ಈ ಚಿಕಿತ್ಸೆಯನ್ನು ಪ್ರಯೋಗಿಸಿದಾಕ್ಷಣ ಕಲ್ಮಶವು ಹೊರಹೋಗಿ ರೋಗವು ಗುಣವಾಗುತ್ತದೆ. "ಒಂದೇ ರೋಗವಾದ್ದರಿಂದ ಅದಕ್ಕೆ ಒಂದೇ ಚಿಕಿತ್ಸೆಯು ಇರಲೇಬೇಕಷ್ಟೆ? ನಿಸರ್ಗಚಿಕಿತ್ಸೆಯೇ ಅದು" ಎಂದು ಗಾಂಧೀಜಿ ವಿವರಿಸಿದರು. ಇದುವೇ ಅದ್ವೈತ ಸಿದ್ಧಾಂತ.

ಈ ಅದ್ವೈತ ಸಿದ್ಧಾಂತವನ್ನು ಮೊದಲು ಕಂಡುಹಿಡಿದವನು ಲೂಯಿ ಖೂನೆ. ಈ ಸಿದ್ಧಾಂತವು ನಿಸರ್ಗಚಿಕಿತ್ಸೆಯನ್ನು ಎಷ್ಟು ಸುಲಭಗೊಳಿಸಿದೆಯೆಂದು ಅಳೆಯಲು ಸಾಧ್ಯವಿಲ್ಲ. ಯಾವ ರೋಗವಾದರೂ ಚಿಕಿತ್ಸೆ ಮಾಡಬೇಕಾದುದು ಒಂದೇ ರೀತಿಯಾಗಿ ಎಂದರೆ ಎಷ್ಟು ಸುಲಭ! ನಿಸರ್ಗಚಿಕಿತ್ಸೆಯು ನಿಜವಾಗಿ ಅಷ್ಟು ಸುಲಭವಾಗಿ ಇರುವುದೂ ಹೌದು. ಆದ್ದರಿಂದಲೇ ನಿಸರ್ಗಚಿಕಿತ್ಸೆ ಸುರುಹಚ್ಚುವ ಮೊದಲು ರೋಗವು ಯಾವುದೆಂದು ನಿರ್ಧರಿಸುವ ಕಾಳಜಿ ಇಲ್ಲ. ರೋಗಿಯ ಶಕ್ತಿ, ಪ್ರಾಯ, ರೋಗದ ಬೆಳವಣಿಗೆ, ಕಾಲ ಇತ್ಯಾದಿಗಳನ್ನು ನೋಡಿಕೊಂಡು ಅಲ್ಪಸ್ವಲ್ಪ ವ್ಯತ್ಯಾಸಮಾಡಿಕೊಂಡರೆ ಮಿಕ್ಕ ವಿಚಾರಗಳಲ್ಲೆಲ್ಲ ಚಿಕಿತ್ಸೆ ಒಂದೇ ರೀತಿ ಇರುತ್ತದೆ.

ಸುಲಭವೂ ಅಗ್ಗವೂ ಆಗಿರುವುದರಿಂದ ಪ್ರತಿಯೊಬ್ಬನೂ ತನಗೆ ತಾನೇ ಡಾಕ್ಟರನಾಗುವ ವಿದ್ಯೆ ನಿಸರ್ಗಚಿಕಿತ್ಸೆ. "ನಿಸರ್ಗಚಿಕಿತ್ಸೆ ಅಭ್ಯಾಸ ಮಾಡಿಕೊಂಡರೆ ಆನಂತರ ಅವನು ಕಾಯಿಲೆ ಬೀಳುವುದಿಲ್ಲ. ಅಥವಾ ಬಿದ್ದರೆ ಅವನು ತನಗೆ ತಾನೆ ಚಿಕಿತ್ಸೆ ನಡೆಸಿ ಗುಣಹೊಂದುತ್ತಾನೆ. ಅವನು ಎಂದೂ ಡಾಕ್ಟರರ, ವೈದ್ಯರ ಅಥವಾ ಹಕೀಮರ ಬಾಗಿಲು ಕಾಯಬೇಕಾಗಿಲ್ಲ"—ಗಾಂಧೀಜಿ.

ಮನೆಮನೆ ಗಂಗಾವತಾರ: "ಇಷ್ಟು ಸಂಜೀವಿನಿಯೇ ಎಂದಾದರೆ ಡಾಕ್ಟರರೂ ವೈದ್ಯರೂ ಏಕೆ ಈ ಚಿಕಿತ್ಸೆಯನ್ನು ಹೇಳುವುದಿಲ್ಲ?" ಗಾಂಧೀಜಿಗೆ ಒಂದು ಪ್ರಶ್ನೆ ಬಂತು. ಅವರು ಹೀಗೆ ಉತ್ತರಿಸಿದರು: "ಮನೆಮನೆಗಳಲ್ಲಿ ಗಂಗಾವತಾರವು ಸಾಧ್ಯವೆಂದು ಡಾಕ್ಟರರು ಒಪ್ಪಿಕೊಂಡರೆ ಅವರ ಜೀವನದ ವೃತ್ತಿಗೇನೇ ತೊಂದರೆಯಾದೀತು. ಆದ್ದರಿಂದ ಅವರು ತಮ್ಮ ಔಷಧ, ಭಸ್ಮ, ಚೂರ್ಣಗಳಲ್ಲೆ ವಿಶ್ವಾಸವಿಡಬೇಕಾಗುತ್ತದೆ; ಮಾತ್ರವಲ್ಲ, ನಿಜವಾದ ಚಿಕಿತ್ಸೆಯನ್ನು ಇತರರಿಗೆ ಹೇಳಬೇಕಾದರೆ ತಾನೂ ಅದನ್ನು ಅನುಭವಿಸಿ ತಿಳಿದಿರಬೇಕು. ಅದು ಬರೇ ಪುಸ್ತಕದ ಬಾಯಿಪಾಠವಲ್ಲ. ಅನುಭವವಿಲ್ಲದವನು ಇತರರಿಗೆ ಅದನ್ನು ಹೇಳುವುದಾದರೂ ಹೇಗೆ? ನಿಸರ್ಗಚಿಕಿತ್ಸೆಯಷ್ಟು ಸುಲಭವಾದ ಚಿಕಿತ್ಸೆ ಇದ್ದರೂ ನಾವು ಡಾಕ್ಟರರ, ವೈದ್ಯರ ಹಿಂದೆ ಹೋಗುವುದು ಆಶ್ಚರ್ಯ."

ನಿಸರ್ಗಚಿಕಿತ್ಸೆಯ ಶಕ್ತಿಯನ್ನು ಗಾಂಧೀಜಿ ಈ ಮಾತುಗಳ ಮೂಲಕ ವ್ಯಕ್ತ

ಪಡಿಸಿದರು: "೧೦೦೦ದಲ್ಲಿ ೯೯೯ 'ಕೇಸು'ಗಳನ್ನು ಕೂಡಾ ಮಣ್ಣು, ನೀರು, ನಿಯಮಿತ ಆಹಾರ ಇತ್ಯಾದಿಗಳಿಂದಲೇ ಗುಣಪಡಿಸಬಹುದು. ಪ್ರತಿಯೊಂದು ಚಿಕ್ಕ ಕಾಯಿಲೆಗೂ ಡಾಕ್ಟರು, ವೈದ್ಯ, ಹಕೀಮರೆಂದು ಓಡಿಕೊಂಡು ಅವರು ಕೊಡುವ ಏನೋ ಮದ್ದುಗಳನ್ನೂ ಸಸ್ಯಗಳನ್ನೂ ನುಂಗಿಕೊಂಡು ಆಯುಷ್ಯ ಕಳಕೊಳ್ಳುವವರಿದ್ದಾರೆ. ಹಾಗೆ ನುಂಗುವವರು ದೇಹದ ಒಡೆಯರಾಗುವ ಬದಲಾಗಿ ದಾಸರಾಗುತ್ತಾರೆ; ಆತ್ಮಶಕ್ತಿಯನ್ನು ಕಳೆದುಕೊಂಡು ಮನುಷ್ಯತ್ವವನ್ನೇ ಇಲ್ಲದಂತೆ ಮಾಡುತ್ತಾರೆ."

ಹಾಗಿದ್ದರೆ ನಾವು ಯಾಕೆ ಬಲುಕಷ್ಟದಿಂದ ವೈದ್ಯಕೀಯ ವಿದ್ಯೆ ಕಲಿಯಬೇಕೆಂದು ಹಲವರು ಕೇಳಬಹುದು. ಗಾಂಧೀಜಿಯ ಅಭಿಪ್ರಾಯ ಹೀಗಿದೆ: "ನಾವು ವೈದ್ಯಕೀಯ ಕಲಿಯುವುದು ಏಕಾಗಿ ಎಂಬುದನ್ನು ನೋಡಬೇಕು. ದೇಶಸೇವೆಗಾಗಿ ಅಲ್ಲವೆಂಬುದು ನಿಶ್ಚಯ. ಕೇವಲ ಹಣ ಮತ್ತು ಹೆಸರಿಗಾಗಿ. ವೈದ್ಯಕೀಯ ವೃತ್ತಿಯಲ್ಲಿ ನಿಜವಾದ ಸೇವೆಯೇ ಇಲ್ಲ. ಮಾತ್ರವಲ್ಲ, ಅದು ಜನತೆಗೆ ಹಾನಿಕಾರಕವಾದುದು. ಡಾಕ್ಟರರು ಇಲ್ಲದ ಜ್ಞಾನವನ್ನು ತೋರಿಸಿಕೊಂಡು, ಅತೀವ ಹಣ ಕಸಿದುಕೊಂಡು ತಿಳಿಯದ ಜನರನ್ನು ವಂಚಿಸುತ್ತಾರೆ."

ನಿಸ್ವಾರ್ಥ ಸೇವೆ: ನಿಜವಾದ ನಿಸ್ವಾರ್ಥ ಸೇವೆಯ ದೃಷ್ಟಿಯಿಂದ ಮುಂದೆ ಬಂದಿರುವ ಒಂದೇ ಒಂದು ವಿಧಾನವೆಂದರೆ ನಿಸರ್ಗಚಿಕಿತ್ಸೆ" ಎಂಬುದಾಗಿ ಗಾಂಧೀಜಿ ಸಾರಿ, ಈ ಚಿಕಿತ್ಸೆಯನ್ನು ಜನರಲ್ಲಿ ಪ್ರಚಾರಮಾಡಲು ನಮ್ಮ ಡಾಕ್ಟರರು ಮುಂದಾಗಬೇಕೆಂದೂ ನಿಸರ್ಗಚಿಕಿತ್ಸಕ ಡಾಕ್ಟರರ ಸಂಖ್ಯೆ ನಮ್ಮಲ್ಲಿ ಬೆಳೆಯಬೇಕೆಂದೂ ಆಶಿಸಿದರು.

ಅಣು ಯುದ್ಧ ವ್ಯರ್ಥ: ರೋಗಗಳು ಅಣುಜೀವಿಗಳಿಂದ ಉಂಟಾಗುತ್ತವೆಂಬ ಆಧುನಿಕ ವೈದ್ಯಶಾಸ್ತ್ರದ ಅಣುಸಿದ್ಧಾಂತವು ಗಾಂಧೀಜಿಯ ಮೆಚ್ಚುಗೆ ಪಡೆಯಲಿಲ್ಲ. ರೋಗ ಕಾರಣದ ಕುರಿತು ಅವರ ಕಲ್ಪನೆ ಏನೆಂದು ನೋಡಿದ್ದೇವೆ—ಕಲ್ಮಶ ಸಂಗ್ರಹ. ಕಲ್ಮಶ ಸಂಗ್ರಹವಾಗಲು ಮುಖ್ಯವಾಗಿ ಬೇಕಾದುದಕ್ಕಿಂತ ಹೆಚ್ಚು ಆಹಾರ ಸೇವಿಸುವುದು ಕಾರಣವೆಂದು ಗಾಂಧೀಜಿ ಮನಗಂಡಿದ್ದರು. ಗಾಂಧೀಜಿಯ ದೃಷ್ಟಿಯಲ್ಲಿ ಶರೀರ ರಕ್ಷಣೆಗೆ ಬೇಕಾದುದಕ್ಕಿಂತ ಹೆಚ್ಚು ಆಹಾರ ಸೇವಿಸುವುದು ಮಹಾ ಪಾಪಕರ್ಮ. "ಹೇಗೆ ದೇಹರಕ್ಷಣೆಗಾಗಿ ಉಸಿರಾಡುವೆವೋ ಹಾಗೆಯೇ ಆಹಾರಸೇವನೆಯಾದರೂ ಶರೀರ ರಕ್ಷಣೆಗಾಗಿ—ರುಚಿಗಾಗಿ ಅಲ್ಲ" ಎಂದರು. "ರುಚಿಯನ್ನು ಹತೋಟಿಗೆ ತಾರದವನು ಇನ್ನೇನನ್ನೂ ಮಾಡಲಾರನು" ಎಂದು ಸಾರಿದರು. ಯಾವ ರೋಗವೇ ಇದ್ದರೂ ಅದು ಇಂತಹ ಪಾಪಕರ್ಮಗಳ ಫಲವಂತೆ. ಒಂದು ಸೀನು, ಕೆಮ್ಮು ಕೂಡಾ ಯಾವುದೋ ಒಂದು ಪಾಪಕರ್ಮದ ಪರಿಣಾಮವೇ ವಿನಾ ಯಾವ ರೋಗವೂ ಬಾಹ್ಯ ಅಣುಜೀವಿಗಳ ಸ್ಪರ್ಶದಿಂದ ಬರಲಾರದು ಎಂಬುದು ಅವರ ಕಲ್ಪನೆ. ಆದ್ದರಿಂದ ರೋಗ ಬಂದಾಗ

ಅಪಾರ ವಿಹಾರಗಳನ್ನು ಸರಿಗೊಳಿಸದೇ ಸುಮ್ಮನೆ ಅಣುಜೀವಿಗಳನ್ನು ಬೇಟೆಯಾಡುವುದು ಕೇವಲ ವ್ಯರ್ಥಾಲಾಪ. ಅಣುಸಿದ್ಧಾಂತವು ಟೊಳ್ಳೆಂದು ತಿಳಿದುದರಿಂದಲೇ ಗಾಂಧೀಜಿ ಎಂದೂ ಅಣುಗಳ ಮೂಲಕ ರೋಗ ಹರಡೀತೆಂಬ ಎಚ್ಚರಿಕೆಗೆ ಗಮನ ಕೊಟ್ಟವರಲ್ಲ. ಡಾಕ್ಟರರು ಕಣ್ಣು ಮೂಗುಗಳನ್ನು ಮುಚ್ಚಿಕೊಂಡು ಭಾರಿಭಾರಿ ಕ್ರಿಮಿನಾಶಕ ವ್ಯವಸ್ಥೆಯಲ್ಲಿ ಇದ್ದಾಗಲೂ ಗಾಂಧೀಜಿ ಅವೊಂದೂ ಇಲ್ಲದೆ ರೋಗೀಜನರು ತನ್ನ ಆಪ್ತ ಸಹೋದರರೆಂಬಂತೆ ಮಹಾಮಹಾ ರೋಗವುಳ್ಳವರನ್ನೂ ಬರಿಕೈಯಿಂದ ಬೆನ್ನು ಚಪ್ಪರಿಸಿ ಸಮಜಾಯಿಸಿ ಶುಶ್ರೂಷೆಗೈದರು. ರೋಗಿಯಾಗಿರಲಿ ಇತರರಾಗಿರಲಿ, ಪರಸ್ಪರ ಹೃದಯಗಳನ್ನು ದೂರಮಾಡುವ ಯಾವುದೇ ವಿಧಾನವು ಮಾನವಸಮಾಜಕ್ಕೆ ಯೋಗ್ಯವಲ್ಲ; ಮಾನವಸಮಾಜವು ಸಹೋದರತಾ ಸಾಮ್ರಾಜ್ಯ ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿಬಿಟ್ಟರು.

ಆಶ್ರಮದಲ್ಲಿ: ಗಾಂಧೀಜಿಯ ಆಶ್ರಮದಲ್ಲಿ ಒಬ್ಬನನ್ನೂ ಬಿಡದೆ ನಿಸರ್ಗ ಚಿಕಿತ್ಸೆಯ ಯಾವತ್ತೂ ಸೇವೆ ಸಂದಿತ್ತು. ಮಣ್ಣಿನ ರೊಟ್ಟಿ ಅಲ್ಲಿನ ಭಾರೀ ತಲೆಗಳ ಮೇಲಕ್ಕೂ ಏರುವಷ್ಟು ಪುಣ್ಯ ಪಡೆದಿತ್ತು. ಎಷ್ಟೋ ಸಾರಿ ಆಪ್ತರನೇಕರು ಸನ್ನಿಪಾತದಂತಹ ವಿಪತ್ತುಗಳಿಗೆ ಗುರಿಯಾದಾಗಲೂ ಗಾಂಧೀಜಿ ಯಾವ ಡಾಕ್ಟರರನ್ನೂ ಮುಟ್ಟಲು ಬಿಡಲಿಲ್ಲ. ತಾವೇ ಸ್ವತಃ ಚಿಕಿತ್ಸೆ ನಡೆಸಿದರು.

ಗಾಂಧೀಜಿ ಡಾಕ್ಟರರಾದುದು: ಗಾಂಧೀಜಿ ಆ ವರೆಗೆ ನಿಸರ್ಗಚಿಕಿತ್ಸೆಯನ್ನು ತಮ್ಮ ಸ್ವಂತದ ಮೇಲೆ ಪ್ರಯೋಗಿಸುತ್ತಿದ್ದರಲ್ಲದೆ ಇತರರ ಮೇಲೆ ಪ್ರಯೋಗಿಸಿರದೆ ಮೊದಲ ಬಾರಿ ಅವರು ಹಾಗೆ ಪ್ರಯೋಗಿಸಿ "ಡಾಕ್ಟರು" ಎನಿಸಿಕೊಂಡ ಘಟನೆಯೊಂದನ್ನು ಹೇಳುತ್ತೇನೆ. ಒಂದು ಬಾರಿ ಗಾಂಧೀಜಿಯ ದ್ವಿತೀಯ ಪುತ್ರ, ಆಗ ೧೦ ವರ್ಷದ ಹುಡುಗ, ಕಠಿಣ ಸನ್ನಿಪಾತಕ್ಕೆ ಗುರಿಯಾದ. ನ್ಯೂಮೋನಿಯಾವೂ ಇತ್ತು, ರಾತ್ರಿ ಹುಚ್ಚುಚ್ಚಾಗಿ ಮಾತನಾಡುತಿದ್ದ. ಗಾಂಧೀಜಿ ಯೋಚಿಸಿದರು. ಸನ್ನಿಪಾತಕ್ಕೂ ನಿಸರ್ಗಚಿಕಿತ್ಸೆ ಸಫಲವಾದೀತೆಂದು ತೋರಲಿಲ್ಲ. ಡಾಕ್ಟರರನ್ನು ಕರೆತಂದರು.

ಮೊಟ್ಟೆ ಮತ್ತು ಹಾಲು ಕೊಡುವುದು ಅಗತ್ಯವೆಂದು ಡಾಕ್ಟರರು ಅಭಿಪ್ರಾಯವಿತ್ತರು. ಆದರೆ, ಗಾಂಧಿಯವರು ಶಾಖಾಹಾರಿ. ಶಾಖಾಹಾರಿ ಜಾತಿ ಮಾತ್ರವಲ್ಲ, ವ್ರತವನ್ನೂ ಹಿಡಿದಿದ್ದರು. ಹಾಗಾಗಿ ಡಾಕ್ಟರರ ಈ ಸಲಹೆಗೆ ಮನ್ನಣೆಕೊಡುವುದು ಸಾಧ್ಯವಿರಲಿಲ್ಲ.

ಗಾಂಧೀಜಿಗೆ ಲೂಯಿ ಖೂನೆಯವರ ಜಲಚಿಕಿತ್ಸೆಯದ್ದು ಸಾಕಷ್ಟು ಪರಿಚಯವಿತ್ತು. ಹುಡುಗನಿಗೂ ಇದನ್ನೇ ಮಾಡಿದರೇನಂತೆ ಎನಿಸಿತು. ಒಡನೆ ಪ್ರಾರಂಭಿಸಿದರು. ಸ್ನಾನವೂ ಉಪವಾಸವೂ ಮುಂದುವರಿಯಿತು. ಮೂರು ದಿನ ಆಹಾರ ಕಿತ್ತಳೆಹಣ್ಣಿನ ರಸ ಮಾತ್ರ. ಆದರೆ ಜ್ವರ ೧೦೪ ಡಿಗ್ರಿಗೆ ಏರಿತು. ಹಾಗಾದೀತೆಂದು ಗಾಂಧೀಜಿ ಎಣಿಸಿರಲಿಲ್ಲ. ರಾತ್ರಿ ಜ್ವರವು ಮೇಲೇರಿ, ಮನೋಭ್ರಮಣೆ ಮಾತು

ಕೂಡಾ ಹೆಚ್ಚಾದುದು ಕಂಡುಬಂತು. ಗಾಂಧೀಜಿಗೆ ಸ್ವಲ್ಪ ಕುತೂಹಲವುಂಟಾಯಿತು. ತುಸು ಭಯವೂ ಬಂತು. ಜನರು ನನ್ನನ್ನು ಏನೆಂದಾರು? ನನ್ನ ಅಣ್ಣ ನನ್ನ ಕುರಿತು ಏನು ತಿಳಿದುಕೊಂಡಾರು? ಬೇರೆ ಡಾಕ್ಟರರನ್ನಾದರೂ ಕರೆಸಬಾರದಿತ್ತೇ? ಆಯುರ್ವೇದ ಪಂಡಿತನಾಗಬಹುದಿತ್ತಲ್ಲ? ತಮ್ಮ ಮಕ್ಕಳ ಮೇಲೆ ತಮ್ಮ ಹುಚ್ಚುತನಗಳನ್ನು ಹೇರಲು ಹೆತ್ತವರಿಗೆ ಏತರ ಅಧಿಕಾರ?

ಗಾಂಧೀಜಿಯವರ ಮೆದುಳಲ್ಲಿ ಈ ರೀತಿಯ ವಿಚಾರಗಳು ಸುತ್ತತೊಡಗಿದುವು. ಅವರು ಏನು ಮಾಡಬೇಕು? ಕೊನೆಗೆ ನಿರ್ಧರಿಸಿದರು: "ನಾನು ನನ್ನ ಮಟ್ಟಿಗೆ ಅನುಸರಿಸುವ ಚಿಕಿತ್ಸೆಯನ್ನು ಮಗನಿಗೂ ಮಾಡಿದರೆ ಪರಮಾತ್ಮನು ಖಂಡಿತವಾಗಿಯೂ ಮೆಚ್ಚುತ್ತಾನೆ. ನನಗೆ ನಂಬುಗೆ ಜಲಚಿಕಿತ್ಸೆಯಲ್ಲಿ; ಎಲೋಪೆಥಿಯಲ್ಲಿಲ್ಲ. ಡಾಕ್ಟರರಾದರೂ ಸ್ಪಷ್ಟವಾಗಿ ಭರವಸೆಕೊಡಲು ಶಕ್ತರಾಗಿಲ್ಲ. ಹೆಚ್ಚೆಂದರೆ ಅವರೂ ಮಾಡುವುದು ಪ್ರಯೋಗ ನಡೆಸುವಂಥಾದ್ದು. ಹೇಗೂ ಜೀವದ ಕೊನೆಯ ಸೂತ್ರವು ಪರಮಾತ್ಮನ ಕೈಯಲ್ಲಿರುವಾಗ ಅವನನ್ನೇ ನಂಬಿ ನಾನು ಸರಿಯೆಂದು ತಿಳಿದಿರುವ ಚಿಕಿತ್ಸೆಯನ್ನೇ ಯಾಕೆ ಮಾಡಬಾರದು?"

ಈ ದ್ವಂದ್ವ ವಿಚಾರದಲ್ಲಿ ಗಾಂಧೀಜಿ ಸಿಲುಕಿದರು. ಆಗ ರಾತ್ರೆ. ಗಾಂಧೀಜಿ ಮಣಿಲಾಲನ ಮಗ್ಗುಲಲ್ಲೇ ಮಲಗಿದ್ದರು. ಅವರು ಒಂದು ಒದ್ದೆ ಬಟ್ಟೆಯ ಪಟ್ಟಿ (Pack) ಮಾಡಿ ಅವನ ದೇಹಕ್ಕೆ ಸುತ್ತಲು ನಿರ್ಧರಿಸಿದರು. ಒದ್ದೆ ಪಟ್ಟಿಯು ಕೂನೆ ಹೇಳುವ ಜಲಚಿಕಿತ್ಸೆಯ ಒಂದು ವಿಧಾನ. ಗಾಂಧೀಜಿ ದೊಡ್ಡದೊಂದು ಬಟ್ಟೆಯನ್ನು ತಣ್ಣೀರಲ್ಲಿ ಅದ್ದಿ, ಹಿಂಡಿ, ಇಡೀ ದೇಹದ ಮೇಲೆ ಮುಖ ಮಾತ್ರ ಬಿಟ್ಟು ಸುತ್ತಿದರು. ದೇಹವು ಕಾದ ಕಬ್ಬಿಣದಂತೆ ಸುಡುತಿತ್ತು. ಬೆವರು ಇರಲಿಲ್ಲ.

ಗಾಂಧೀಜಿ ಬಲು ದಣಿದಿದ್ದರು. ಮಣಿಲಾಲನನ್ನು ಅವನ ತಾಯಿಯ ವಶ ಕ್ಕೊಪ್ಪಿಸಿ ಹೊರಬಯಲಲ್ಲಿ ದಣುವಾರಿಸಿಬರಲು ಹೊರಟರು. ಆಗ ರಾತ್ರೆ ೧೦ ಗಂಟೆಯಾಗಬಹುದು. ಬಯಲಲ್ಲಿ ಜನಸಂಚಾರ ಕಡಮೆಯಾಗಿತ್ತು. ಗಾಂಧೀಜಿ ಅದೊಂದನ್ನೂ ನೋಡಲಿಲ್ಲ. ರಾಮನಾಮ ಧ್ಯಾನಮಾಡುತ್ತಾ "ಹೇ ಹರಿ, ನನ್ನ ಮಾನಾಪಮಾನವೆರಡೂ ನಿನ್ನ ಕೈಯಲ್ಲಿದೆ; ಈ ಪರೀಕ್ಷಾ ಕಾಲದಲ್ಲಿ ರಕ್ಷಿಸಲಾರೆಯಾ?" ಎಂದು ಬೇಡಿಕೊಂಡರು. ಸಂಪೂರ್ಣ ನಿರಾಶೆಯಲ್ಲಿ ಪುನಃ ಹಿಂದುರಿಗಿದರು.

"ಬಂದೆಯಾ ತಾತಾ?" ಮಣಿಲಾಲ್ ಕೇಳಿದನು.

"ಹೌದು ಮಗೂ."

"ದಯಮಾಡಿ ನನ್ನನ್ನು ಹೊರಗೆ ತೆಗೆ. ಸುಡುತ್ತಿದೆ."

"ಬೆವರಿದೆಯೇ ಮಗು?"

"ಪೂರ್ಣ ಒದ್ದೆಯಾದೆ ತಾತ, ದಯಮಾಡಿ ಹೊರಗೆ ತೆಗೆ."

ಗಾಂಧೀಜಿ ಹುಡುಗನ ಹಣೆಯ ಮೇಲೆ ಕೈಯಿರಿಸಿ ನೋಡಿದರು. ಬೆವರ ಹನಿಗಳಿದ್ದುವು. ಉಷ್ಣತೆ ಇಳಿಯುತ್ತಿತ್ತು. ಗಾಂಧೀಜಿಗೆ ಉಸಿರು ಬಂತು. ಮತ್ತೊಮ್ಮೆ ದೇವರನ್ನು ಸ್ಮರಿಸಿಕೊಂಡರು. ಜ್ವರ ಬರುವ ರೋಗಿಗಳಿಗೆ ಬೆವರುವಂತೆ ಮಾಡುವುದು ಅತಿ ಪ್ರಾಮುಖ್ಯವೆಂದು ಖೂನೆ ಹೇಳುತ್ತಾನೆ. ಬೆವರುತ್ತಿದೆಯಾದರೆ ಗುಣವಾದೀತು, ಅಲ್ಲವಾದರೆ ಕಠಿಣಸ್ಥಿತಿಯೆಂದು ತಿಳಿಯಬೇಕು ಎನ್ನುತ್ತಾನೆ ಖೂನೆ. ಬೆವರ ಹನಿ ಕಂಡಾಗ ಗಾಂಧೀಜಿಗೆ ಸಮಾಧಾನ ಬಂದುದರ ಕಾರಣ ಇಷ್ಟೆ.

"ಮಣಿಲಾಲ್, ನಿನ್ನ ಜ್ವರ ಇನ್ನು ಖಂಡಿತವಾಗಿ ಗುಣವಾಗುತ್ತದೆ. ಇನ್ನು ಕೂಸು ಬೆವರಲಿ, ಅನಂತರ ತೆಗೆಯುತ್ತೇನೆ."

"ಬೇಡ ತಾತ, ಈಗಲೇ ತೆಗೆ. ಈ ಕಾವಲುವೆಯಲ್ಲಿ ಬೇಯುತ್ತಿದ್ದೇನೆ. ಬೇಕಾದರೆ ಇನ್ನು ಯಾವಾಗಲಾದರೂ ಪುನಃ ಸುತ್ತುವೆಯಂತೆ."

ಹೇಗೂ ಹುಡುಗನ ಮನಸ್ಸು ಬೇರೆ ಕಡೆಗೆ ಸೆಳೆದು ಕೆಲವು ನಿಮಿಷ ಕಳೆದರು. ಬೆವರು ಹಣೆಯಿಂದ ಧಾರೆಯಾಗಿ ಇಳಿಯತೊಡಗಿತು. ಈಗ ಬಿಡಿಸಿ ಮೈ ಒರಸಿದರು. ಹುಡುಗ ಸುಖವಾಗಿ ನಿದ್ರಿಸಿದ. ಗಾಂಧೀಜಿಯೂ ಅದೇ ಚಾಪೆಯಲ್ಲಿ ನಿದ್ರಿಸಿಕೊಂಡರು.

ತಂದೆ ಮತ್ತು ಮಗ ಇಬ್ಬರೂ ಕೊಳ್ಳಿಯಂತೆ ನಿದ್ರಿಸಿದರು. ಮೂರನೆಯ ದಿನ ಜ್ವರ ಇಳಿದಿತ್ತು ನಲುವತ್ತು ದಿನಗಳ ವರೆಗೆ ಹಾಲು ಮತ್ತು ಹಣ್ಣಿನ ರಸ ಮಾತ್ರ ಆಹಾರ. ಚಿಕಿತ್ಸೆ ಮುಂದುವರಿಯಿತು. ಈಗ ಗಾಂಧೀಜಿಗೆ ಪೂರ್ಣ ಧೈರ್ಯ ಬಂದಿತ್ತು........"ಈಗ ನನ್ನ ಮಕ್ಕಳಲ್ಲೆಲ್ಲ ಮಣಿಲಾಲನೇ ಆರೋಗ್ಯವಂತನು" ಎಂದು ಅನಂತರ ಒಂದು ಬಾರಿ ಗಾಂಧೀಜಿ ಶಿಫಾರಸು ಮಾಡಿದ್ದರು.

ಈ ಘಟನೆಯು ನನ್ನ ಅನುಭವದ ಇನ್ನೊಂದು ಘಟನೆಯನ್ನು ನೆನಪಿಗೆ ತರುತ್ತದೆ. ಇದೂ ಇದೇ ರೀತಿಯದು. ಗಾಂಧೀಜಿ ಹೇಳುವ ಪ್ರಯೋಗಗಳು ಹೇಗೆ ನಮ್ಮ ನಿತ್ಯಜೀವನಕ್ಕೂ ಅನ್ವಯಿಸತಕ್ಕವುಗಳೆಂಬುದನ್ನು ಸೂಚಿಸುವುದಕ್ಕಾಗಿ ಅದನ್ನು ಇಲ್ಲಿ ಕೊಡಬಯಸುತ್ತೇನೆ.

ನನ್ನ ತಂಗಿ ವೇದಾವತಿಗೆ ಆಗ ೫ ವರ್ಷ. ಇದು ಇಂದಿಗೆ ಸುಮಾರು ೧೬–೧೭ ವರ್ಷಗಳ ಹಿಂದೆ ಜ್ವರ ಪ್ರಾರಂಭವಾಯಿತು. ಈ ಮೊದಲೇ ನನ್ನ ತೀರ್ಥರೂಪರು, ಶ್ರೀ। ಮುರಕ್ಕಿಣಿ ಗೋವಿಂದ ಭಟ್ಟರು ತಮ್ಮ ಮಟ್ಟಿಗೆ ನಿಸರ್ಗಚಿಕಿತ್ಸೆಯನ್ನನುಸರಿಸಿ ತುಂಬಾ ಗುಣಪಡೆದಿದ್ದರು. ಯಾವುದೇ ರೋಗಕ್ಕೂ ಈ ಚಿಕಿತ್ಸೆ ಹಿಡಿದೀತೆಂಬ ವಿಶ್ವಾಸ ಅವರಲ್ಲಿ ಉಂಟಾಗಿತ್ತು. ಆದರೆ ಮನೆಯ ಇತರ ಹಿರಿಯರಿಗೂ ಹೆಮ್ಮಕ್ಕಳಿಗೂ ಅಂತಹ ವಿಶ್ವಾಸ ಬಂದಿರಲಿಲ್ಲ. ಆದ್ದರಿಂದ ಮಗುವಿಗೆ ಯಾವ ಚಿಕಿತ್ಸೆಮಾಡಿಸಬೇಕೆಂಬ ಕುರಿತು ಭಿನ್ನಾಭಿಪ್ರಾಯ ಬಂತು. ನಿಸರ್ಗಚಿಕಿತ್ಸೆಯೋ, ಮದ್ದೋ? ಅಂತೂ ಹೆಚ್ಚಾಗಿ ಎಲ್ಲಾ ಕಡೆಗಳಲ್ಲಿಯೂ ಆಗುವಂತೆ

ಇಲ್ಲಿಯೂ ಹೆಮ್ಮಕ್ಕಳೇ ಮೇಲ್ಗೈ ಪಡೆದರು. ವೈದ್ಯರೊಬ್ಬರ ಆಗಮನವೂ ಆಯಿತು ಯಥಾವತ್ತಾಗಿ ಚಿಕಿತ್ಸೆ ನಡೆಯಿತು. ಜ್ವರ ಏರಿದ್ದು ವಿನಾ ಇಳಿಯಲಿಲ್ಲ. ಮತ್ತೂ ಮದ್ದು ಕುಡಿಸಿದರು. ಮಗು ಬಲು ಕ್ಷೀಣವಾಯಿತು. ಒಂದು ವಾರದಲ್ಲಿ, 'ಸನ್ನಿಪಾತ' ಎಂದು ವೈದ್ಯರೆಂದರು. ಅನಂತರ ಇನ್ನೊಬ್ಬ ನುರಿತ ಡಾಕ್ಟರರ ಸೇವೆಯೂ ಸಂದಿತು. ಪ್ರಯೋಜನವಾಗಲಿಲ್ಲ. ನಾಲ್ಕಾರು ದಿನಗಳಲ್ಲಿ ಹುಡುಗಿ ಒಣಗಿ ಕಡ್ಡಿಯಂತಾದಳು. ಬಲು ಆಯಾಸ, ಅತಿ ಬಾಯಾರಿಕೆ ಹೀಗೇ ಮುಂದುವರಿದು, ಕೊನೆಗೆ ಸ್ಮೃತಿ ತಪ್ಪಿತು. ಮಲಮೂತ್ರಗಳೆಲ್ಲಾ ಇಂದ್ರಿಯ ಜ್ಞಾನವೇ ಇಲ್ಲದೆ ಹೋಗುತ್ತಿದ್ದವು. ಜ್ವರ ೧೦೫ ಡಿಗ್ರಿಯಲ್ಲಿ ಬಿಡದೇ ಬರುತ್ತಿತ್ತು. ಎರಡು ವಾರ ಕಳೆಯಿತು. ಒಂದು ದಿನ ರಾತ್ರಿ ಪರಿಸ್ಥಿತಿ ಚಿಂತಾಜನಕವಾಯಿತು. ಮಗುವಿಗೆ ಮೂರ್ಛೆ ಇಲ್ಲ, ಮಲದಲ್ಲಿ ಮಾಂಸವೇ ಹೋಗುತ್ತಿತ್ತು; ಮಹಾದುರ್ವಾಸನೆ. ಉಸಿರು ಮಾತ್ರ ಸೂಕ್ಷ್ಮವಾಗಿ ಹರಿಯುತ್ತಿತ್ತು. ತೀರ್ಥರೂಪರಿಗೆ ಇದನ್ನು ನೋಡಿ ಹೃದಯ ಕರಗಿತು. ಮಗುವು ಸಾವನ್ನು ಸಮೀಪಿಸುತ್ತಿದೆಯೆಂದು ಅವರಿಗೆ ನಿರ್ಧಾರವಾಯಿತು. ಅವರ ಕಣ್ಣಿನಿಂದ ಎರಡು ಹನಿಗಳುದುರಿದುವು. "ನಿರಪರಾಧಿ ಮಗುವನ್ನು ಈ ರೀತಿಯಲ್ಲಿ ಔಷಧಿ ಕುಡಿಯಿಸಿ ಕೊಲ್ಲುವಂತಾಯಿತೇ ಪರಮಾತ್ಮ!" ಎಂದು ಅವರಿಗೆ ತೋರಿರಬೇಕು. ಏನನ್ನೂ ಹೇಳದೆ ನೇರಾಗಿ ಹೊರನಡೆದು ಅಂಗಳದಲ್ಲಿ ಮಲಗಿಕೊಂಡರು. ನಿಸರ್ಗಚಿಕಿತ್ಸೆಯು ಮಗುವನ್ನು ಬದುಕಿಸುತ್ತಿತ್ತೆಂದು ಅವರಿಗೆ ಖಂಡಿತವಾಗಿ ಗೊತ್ತಿತ್ತು. ಆದರೆ, ಇತರರೆಲ್ಲ ಅವರೊಬ್ಬರೇ ಆಗಿದ್ದುದರಿಂದ ಬತ್ತಳಿಕೆಯಲ್ಲಿ ಬ್ರಹ್ಮಾಸ್ತ್ರವಿದ್ದರೂ ಆಪತ್ಕಾಲದಲ್ಲಿ ಪ್ರಯೋಗಿಸಲಾರದವರಂತೆ ನಿರುಪಾಯರಾಗಿ ಮಲಗಿಕೊಂಡರು. ಹೆಮ್ಮಕ್ಕಳಿಗೂ ತೀರ್ಥರೂಪರ ಕಣ್ಣೀರಿನ ಅರ್ಥವಾಯಿತು. ಮಗುವನ್ನು ಸುತ್ತುಗಟ್ಟಿ ಕಣ್ಣೀರಿಟ್ಟು ಕೂಗಿದರು. ಏನು ಪ್ರಯೋಜನ? ಮಗು ಮೂರ್ಛೆತಪ್ಪಿ ಬಿದ್ದಿತ್ತು. ಕೊನೆಗಂತೂ ಕಡೇ ಯತ್ನವಾಗಿ ನಿಸರ್ಗಚಿಕಿತ್ಸೆಯನ್ನು ಮಾಡಬಹುದಿತ್ತೆಂದು ಎಲ್ಲರೂ ಒಪ್ಪಿದರು. ಆದರೆ, ಈಗ ಸಮಯ ಮೀರಿಹೋಗಿತ್ತು. ಆದರೂ ಬದುಕುವ ಆಸೆ ಇಲ್ಲವಾದರೂ ನೀರು ಕೂಡಾ ಕೊಡದೆ ಕೊಲ್ಲುವುದು ಬೇಡ, ಸಾಯುವ ಕಾಲಕ್ಕೆ ನೀರಾದರೂ ಕೊಡಬಹುದಲ್ಲ—ಎಂದು ರೋಗಿಯ ಬಾಯಿಗೆ ಎರಡು ಹನಿ ತಣ್ಣೀರು ಕೊಟ್ಟೆವು. ಕಿಬ್ಬೊಟ್ಟೆಗೆ ಒದ್ದೆ ಬಟ್ಟೆಯ ಬೇಂಡೇಜೂ ಆಯಿತು. ಹುಡುಗಿಗೆ ಮೂರು ದಿನದಿಂದ ಸಹಿಸಲಾರದ ಬಾಯಾರಿಕೆಯಿತ್ತು. ದಿನವಿಡೀ "ನೀರು, ನೀರು" ಎಂದು ಜಪಿಸುತಿದ್ದಳು. ಆದರೆ, ನೀರು ಮುಟ್ಟಕೂಡದೆಂದು ಡಾಕ್ಟರರ ಅಪ್ಪಣೆಯಿತ್ತು. ಈಗ ನೀರು ಕುಡಿಯಲು ಕೊಟ್ಟು ಹತ್ತು ಹದಿನೈದು ನಿಮಿಷಗಳಲ್ಲಿ ಹುಡುಗಿ ಕಣ್ಣು ತೆರೆದಳು. ಆಗ ರಾತ್ರೆ. ಬೆಳಗಾಗುವ ಮೊದಲು ಟಬ್ಬಿನಲ್ಲಿ ತಣ್ಣೀರು ತುಂಬಿಸಿ ನಾಲ್ಕಾರು ಸಾರಿ ಕಟಿಸ್ನಾನಮಾಡಿಸಿದೆವು. ಹೀಗೆಯೇ ಮೂರು ದಿನ ಮಾಡಿದಾಗ ಜ್ವರ ಹಿಂದೆ ಸರಿಯಿತು. ಹುಡುಗಿ ಸುಧಾರಿಸಿದಳು. ಒಂದೆರಡು ವಾರದಲ್ಲಿ ಸಂಪೂರ್ಣ ಚೇತರಿಸಿಕೊಂಡಳು.

ಅಂದಿನಿಂದ ಇಂದಿನ ವರೆಗೆ ನಾವು ನೂರಾರು ರೋಗಿಗಳನ್ನು ಇದೇ ಚಿಕಿತ್ಸೆಯ ಮೂಲಕ ಗುಣಮಾಡಿದ್ದೇವೆ. ನಾವೇನೂ ವೈದ್ಯಕೀಯ ಕಲಿತವರಲ್ಲ. ಎಷ್ಟೋ ಡಾಕ್ಟರರು 'ಅನಿವಾರ್ಯ,' 'ಅಸಾಧ್ಯ,' 'ಗುಣವಾಗದು'—ಎಂದು ತ್ಯಜಿಸಿದ್ದ ರೋಗಿಗಳನ್ನು ಸಂಪೂರ್ಣ ಗುಣಪಡಿಸಿದ್ದೇವೆ. ಕ್ಷಯ, ಕೇನ್ಸರ್, ವಾತ, ಅಸ್ತ್ಮ, ಸ್ಖಲನ ಇತ್ಯಾದಿಗಳೂ ಗುಣವಾಗಿವೆ. ಹೆರಿಗೆ ಬಾಣಂತಿತನಗಳು ಒಂದಿಷ್ಟು ಕಷಾಯ, ಕಹಿ, ಮದ್ದು ಯಾವುದೂ ಇಲ್ಲದೆ ಬರೇ ಮಣ್ಣು, ನೀರುಗಳ ಸಹಾಯದಿಂದ ಎಷ್ಟೋ ಆಗಿ ಕಳೆದಿವೆ. (ಇವೆಲ್ಲವುಗಳ ಕುರಿತು ಇಲ್ಲಿ ಹೇಳಲು ಇದು ಜಾಗವಲ್ಲ. ನನ್ನ ಪುಸ್ತಕದಲ್ಲಿ ವಿವರವಾಗಿ ಹೇಳಿದ್ದೇನೆ.)

ಕಸ್ತೂರಬಾರವರ ಮೇಲೆ ಬಲವಂತ: ಗಾಂಧೀಜಿಯವರ 'ರಾಮಬಾಣ' ಪ್ರಯೋಗ ಕಸ್ತೂರಬಾರವರ ಮೇಲೂ ನಡೆದಿವೆ. ಗಾಂಧೀಜಿಗೆ ನಿಸರ್ಗಚಿಕಿತ್ಸೆಗೆ ಆ ಹೆಸರಿಗಿಂತ ರಾಮಬಾಣವೆಂಬ ಹೆಸರಲ್ಲಿ ಮೆಚ್ಚುಗೆ.

ಕಸ್ತೂರಬಾಗೆ ಗಾಂಧೀಜಿಯ ಈ ಮಣ್ಣು ನೀರುಗಳ ಹುಚ್ಚಾಟಿಕೆ ಹಿಡಿಸುತ್ತಿರಲಿಲ್ಲ. ಆಫೀಸಿನಲ್ಲಿ ಕುಳಿತಿರುವಾಗಲೂ ತಲೆಗೆ ಮಣ್ಣು ಮೆತ್ತಿಕೊಳ್ಳುವುದು ಹುಚ್ಚು ಎಂದು ಅವರು ತಿಳಿಯುತ್ತಿದ್ದರು. ಅದರಲ್ಲೂ ಯಾರಾದರೂ 'ನಂಬ್ರ'ದ ಗಿರಾಕಿಗಳೋ ರಾಜಕೀಯ ಸ್ನೇಹಿತರೋ ಬಂದಿರುವಾಗ ಇಂತಹ ಮೂರ್ಖತನದ ಮಂಗವಿದ್ಯೆಗಳನ್ನು ತೋರಿಸುವುದಕ್ಕಾಗಿ ಅವರು ಆಗಾಗ ಗಾಂಧೀಜಿಯವರ ಎದುರು ಯುದ್ಧ ಹೂಡುತ್ತಿದ್ದರು. ವಕೀಲಿಯಂತಹ ಗೌರವದ ವೃತ್ತಿಗೆ ನಿಸರ್ಗ ಚಿಕಿತ್ಸೆ ಸಲ್ಲದೆಂದು ಕಸ್ತೂರಬಾ ತೆಗೆದುಹಾಕಿದ್ದರು. ಆದರೆ, ನಿಸರ್ಗಚಿಕಿತ್ಸೆ ಅಂಟುರೋಗವೆಂದೆನಲ್ಲ? ಮೊದಮೊದಲು ನಿಂದಿಸಿದವರಿಗೂ ಕೊನೆಕೊನೆಗೆ ಅದು ಅಂಟುತ್ತದೆ. ಕಸ್ತೂರಬಾಗೂ ಹೀಗೆ ಆಯಿತು. ಸ್ವಲ್ಪ ಕಾಲ ಬೇಕಾಯಿತೆನ್ನಿ. ಪ್ರಾರಂಭದಲ್ಲಿ ಬಾರವರನ್ನು ತನ್ನ ದಾರಿಗೆ ತಿರುಗಿಸಲು ಗಾಂಧೀಜಿ ತನ್ನ ತಪಸ್ಸನ್ನೆಲ್ಲ ಧಾರೆಯೆರೆಯಬೇಕಾಯಿತು.

ಕಸ್ತೂರಬಾರಿಗೊಮ್ಮೆ ಮೂಲವ್ಯಾಧಿ ಸಂಬಂಧ ರಕ್ತಸ್ರಾವ ಉಂಟಾಯಿತು. ಜಲಚಿಕಿತ್ಸೆ ಮಾಡಿಸಿದರು ಗಾಂಧೀಜಿ. ಸಾಕಾಗಲಿಲ್ಲ. ಹೆಚ್ಚಿನ ತೀಕ್ಷ್ಣತೆಯಿಂದ ಚಿಕಿತ್ಸೆ ನಡೆಸುವುದು ಅವಶ್ಯಕವಾಗಿತ್ತು. ಉಪ್ಪು ಮತ್ತು ಧಾನ್ಯ ಪೂರ್ಣ ವರ್ಜಿಸಬೇಕೆಂದರು "ಡಾಕ್ಟರ್" ಗಾಂಧೀಜಿ. ಎಷ್ಟು ಹೇಳಿದರೂ ಬಾ ಇದಕ್ಕೆ ಒಪ್ಪಲಾರರು. ಏನೇನು ಸಮರ್ಥನೆಗಳನ್ನು ಕೊಟ್ಟರೂ ಬಾಗೆ ಸಮಾಧಾನವಾಗಲಿಲ್ಲ. "ನಾನು ಸರಿಯಾಗಿ ನಾಲಗೆ ಬಿಗಿಹಿಡಿಯುವುದಿಲ್ಲ ಎಂದು ದೂರುತ್ತೀರಿ. ನೀವಾಗಿರುತ್ತಿದ್ದರೆ ಹಾಗೆ ಮಾಡುತ್ತಿದ್ದಿರೋ?" ಎಂಬುದಾಗಿ ಬಾರವರು ಗಾಂಧೀಜಿಗೆ ಹೇಳಿದರು. ಗಾಂಧೀಜಿಗೆ ನಾಟಿತು. ಏನು ಹೇಳಬೇಕೋ ತಿಳಿಯದು. ಕೊನೆಗೆ "ನಿನ್ನ ಅಭಿಪ್ರಾಯ ತಪ್ಪು. ನನಗೆ ಸುಖವಿಲ್ಲದಾಗ ಡಾಕ್ಟರರು ಈ ರೀತಿ ಮಾಡಬೇಕೆಂದು ವಿಧಿಸಿದ್ದರೆ ಹಾಗೆಯೇ ಮಾಡುತ್ತಿದ್ದೆ. ಹೋಗಲಿ. ಈಗಂತೂ

ಸುಖವಿದೆಯಾದರೂ ಹಾಗೆ ಮಾಡುವುದನ್ನು ನೋಡುವೆಯಂತೆ. ಇಂದಿನಿಂದ ಒಂದು ವರ್ಷದ ವರೆಗೆ ಉಪ್ಪು ಮತ್ತು ಧಾನ್ಯ ಮುಟ್ಟುವುದಿಲ್ಲ. ನನ್ನ ದೇಹವಾದರೂ ಶುದ್ಧವಾಗಲಿ. ನೀನು ಬಿಡು ಅಥವಾ ಬಿಡದಿರು" ಎಂಬುದಾಗಿ ಗಾಂಧೀಜಿ ಪಣತೊಟ್ಟರು.

ಬಾರವರಿಗೆ ಆಗಸವೇ ಬಿದ್ದಂತಾಯಿತು. ಗಾಂಧೀಜಿ ಹೇಳಿದಂತೆ ಮಾಡುವುದಾಗಿ ಒಪ್ಪಿದರು. ಆದರೂ ತನಗಾಗಿ ಗಾಂಧೀಜಿ ಈ ರೀತಿ ವ್ರತಹಿಡಿಯುವುದು ಅವರಿಗೆ ಸೈರಿಸಲಿಲ್ಲ. ಅಂಗಲಾಚಿ ಬೇಡಿಕೊಂಡರು. ಆದರೆ, ಅದು ಹಾಲಿಗೆ ಹಾಕಿದ ಹೆಪ್ಪು. ಪುನಃ ಹಾಲಾದೀತೇ? ಗಾಂಧೀಜಿಯವರು ಪಣ ಹಿಂದೆಯಲಿಲ್ಲ.

ಕಸ್ತೂರಬಾ ಉಪ್ಪು ಮತ್ತು ಧಾನ್ಯ ಬಿಟ್ಟುಬಿಟ್ಟರು. ಅವರ ಆರೋಗ್ಯವೂ ಸುಧಾರಿಸಿತು. ಸ್ರಾವ ಪೂರ್ಣವಾಗಿ ನಿಂತಿತು. ಅಂದಿನಿಂದ ಗಾಂಧೀಜಿಗೆ ಕಸ್ತೂರಬಾರವರಿಂದ 'ಡಾಕ್ಟರ್' ಸರ್ಟಿಫಿಕೇಟು ಬಂತು.

ಹೌದು. ನಿಸರ್ಗಚಿಕಿತ್ಸೆಯಲ್ಲಿ ಆಹಾರ ನಿಯಮಗಳು ಕೊಂಚ ಇವೆ. ಮುಖ್ಯವಾಗಿ ಆಹಾರದೋಷಗಳೇ ಕಾಯಿಲೆಯ ಕಾರಣವಾದ್ದರಿಂದ ಆಹಾರ ನಿಯಮ ಇರಿಸದೆ ಕಾಯಿಲೆ ಹೋಗುವಹಾಗಿಲ್ಲ.

ಮದ್ದಿನ ವಿರೋಧಿ: ಗಾಂಧೀಜಿಗೊಮ್ಮೆ ಅಜೀರ್ಣವುಂಟಾಗಿ ತುಸು ಆಮಶಂಕೆ ಪ್ರಾರಂಭವಾಯಿತು. ಆಹಾರವೇನೋ ತುಸು ಅಧಿಕವಾಗಿರಬೇಕು. ಕೆಲಸದ ಭರದಲ್ಲಿ ಗಾಂಧೀಜಿ ಇದನ್ನು ಗಮನಕ್ಕೆ ಹಚ್ಚಿಕೊಳ್ಳಲಿಲ್ಲ. ಮದ್ದುಗಳನ್ನು ತೀರಾ ವರ್ಜಿಸಿದ್ದುದರಿಂದ ಮದ್ದನ್ನು ಸೇವಿಸಲಿಲ್ಲ. ಒಂದು ಊಟ ಬಿಟ್ಟು ಉಪವಾಸಮಾಡಿದರೆ ಇದು ಶಾಂತವಾದೀತೆಂದು ಹಾಗೆ ಮಾಡಿದರು. ಸ್ವಲ್ಪ ಶಾಂತವಾದ್ದೂ ಹೌದು. ಆದರೆ ಪೂರ್ತಿ ಗುಣವಾಗಲು ಮತ್ತೂ ಒಂದೆರಡು ಉಪವಾಸ ಬೇಕಾಗಿತ್ತೋ ಏನೋ. ಅವರಿಗೆ ಅದು ಗೊತ್ತೂ ಇತ್ತು. ಆದರೆ ...

ಆದರೆ ...ಏನು? ಉಪವಾಸ ಮಾಡಲು ಏನು ತೊಂದರೆ? ಆಹಾರವಿಲ್ಲದೆ ಸುಮ್ಮನೆ ಇದ್ದರಾಯಿತಲ್ಲವೇ? ಎಲ್ಲಾ ರೋಗಿಗಳಿಗೆ ಬರುವ ಕಷ್ಟ ಗಾಂಧೀಜಿಗೂ ಬಂತು. ನಾಲಗೆಯನ್ನು ಬಿಗಿಹಿಡಿಯಬೇಕಲ್ಲವೇ? ಜಗಜ್ಜೀತ ದುರ್ಗವನ್ನೂ ದಾಟಬಿಡುವಂತಹ ನಾಲಿಗೆಯ ತುಂಟಕುಮರೆ ಕೇಳಲಿಲ್ಲ.

ಆ ದಿನ ಅಲ್ಲೊಂದು ಜಾತ್ರೆ; ಔತಣ. ಗಾಂಧೀಜಿ ಕಸ್ತೂರಬಾರವರೊಡನೆ ಅಂದು ಮಧ್ಯಾಹ್ನ ಊಟ ಬೇಡವೆಂದಿದ್ದರೂ ಔತಣದಂದು ಗಾಂಧೀಜಿ ಊಟ ಬಿಡುವುದು ಬಾರವರಿಗೆ ಸಮಾಧಾನವಿಲ್ಲ. "ಉಪವಾಸ ಇನ್ನೊಂದು ದಿನ ಮಾಡುವಿರಂತೆ. ಔತಣದಂದು ಬೆಕ್ಕಿನ ಬಿಡಾರ ಬೇರೆ ಮಾಡಬೇಕೆ?" ಎಂದರು ಬಾ.

ಗಾಂಧೀಜಿಗೆ ರೊಟ್ಟಿಗೆ ಬೆಣ್ಣೆ ಹಚ್ಚಿದಂತಾಯಿತು. ಅಷ್ಟು ಯಾರೂ ಹೇಳುವುದಿಲ್ಲ ಎಂದು ಕಾದಿತ್ತು ಅವರ ನಾಲಗೆ. ಅದರಲ್ಲೂ ಈಗ ಕಸ್ತೂರಬಾರೇ ಹಾಗೆನ್ನುವಾಗ ವಿಶೇಷಣವೂ ಹಾಕಿಕೊಂಡರು. ಯಥಾಪ್ರಕಾರವಾಗಿ ಉಂಡರು.

ಸೆಮುನಿಚ್: "ಅವರ ವಿಚಾರ ಚೆನ್ನಾಗಿ ಗೊತ್ತುಂಟು. ಅವರೆಲ್ಲಾ ಬಹಳ ಐಶ್ವರ್ಯವಂತರಾಗಿದ್ದಾರೆ. ಆದರೆ, ಅವರ ತಂದೆ ಮಾತ್ರ ನಮ್ಮಂತೆಯೇ ಅಪಾದಿತನಾಗಿ ಪಾಪಿಯಾಗಿ ಸೈಬೀರಿಯಾದಲ್ಲಿ ಎಲ್ಲಿಯೋ ನರಳುತ್ತಿದ್ದಾನೆ. ಆದರೆ, ಪಿತಾಮಹನೇ, ನೀನು ಇಲ್ಲಿ ಬರುವುದಕ್ಕೆ ಕಾರಣವೇನು?"

ತನ್ನ ದುರ್ದಶೆಯ ಕುರಿತು ಏನು ಹೇಳುವುದಕ್ಕೂ ಅತನಿಷ್ಟಪಡಲಿಲ್ಲ. ಕೇವಲ ನಿಟ್ಟುಸಿರನ್ನು ಮಾತ್ರ ಬಿಟ್ಟು "ನನ್ನ ಪಾಪಗಳಿಗಾಗಿ ಇಪ್ಪತ್ತಾರು ವರ್ಷಗಳಿಂದ ಇಲ್ಲಿ ನರಳುತ್ತಿದ್ದೇನೆ" ಎಂದಿಷ್ಟೇ ಹೇಳಿದನು.

"ಎಂತಹ ಪಾಪಗಳು?" ಸೆಮುನಿಚ್ ಕೇಳಿದನು

ಆದರೆ ಆಕ್ಸೆನೋವ್ "ಒಳ್ಳೆಯದು. ನಾನು ಈ ಶಿಕ್ಷೆಗೆ ಬಹುಶಃ ಅರ್ಹನಾಗಿದ್ದೇನೆ!'' ಎಂದನು. ಇನ್ನು ಮುಂದೆ ಅತನು ಹೇಳುವುದಕ್ಕೂ ಇಷ್ಟಪಡಲಿಲ್ಲ. ಆದರೆ, ಅತನ ಒಡನಾಡಿಗಳು ಅತನು ಸೈಬೀರಿಯಾಕ್ಕೆ ಬಂದ ಬಗೆಯನ್ನು ಹೊಸಬನಿಗೆ ಹೇಳಿದರು. ಯಾರೋ, ಒಬ್ಬ ವ್ಯಾಪಾರಿಯನ್ನು ಕೊಲೆಮಾಡಿ ಈತನ ಚೀಲದಲ್ಲಿ ರಕ್ತಲೇಪಿತ ಚೂರಿಯನ್ನಡಗಿಸಿಟ್ಟು ಪರಾರಿಯಾಗಿದ್ದರು. ಆದರಿಂದ ಇವನು ಅನ್ಯಾಯವಾಗಿ ಕೈದಿಯಾದನೆಂದು ತಿಳಿಸಿದರು.

ಮಕಾರ್ ಸೆಮುನಿಚ್ಚನು ಇದನ್ನು ಕೇಳಿದೊಡನೆ ಬಹಳ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ "ಇದು ಆಶ್ಚರ್ಯ! ನಿಜವಾಗಿಯೂ ಆಶ್ಚರ್ಯ! ಆದರೆ, ಪಿತಾಮಹನೇ, ನೀನೆಷ್ಟು ಮುದುಕನಾಗಿದ್ದಿ!''

ಕೈದಿಗಳು ಕೇಳಿದರು: ''ನೀನು ಆಶ್ಚರ್ಯಪಡುವುದಕ್ಕೆ ಕಾರಣವೇನು? ಆಕ್ಸೆನೋವನ್ನು ಈ ಮೊದಲು ನೋಡಿರುವೆಯಾ?'' ಆದರೆ ಸೆಮುನಿಚ್ ಉತ್ತರಿಸಲಿಲ್ಲ. ಮಾತುಗಳನ್ನು ಬೇರೆ ವಿಚಾರಗಳಿಗೆ ತಿರುಗಿಸಿದನು.

ಇದರಿಂದಲಾಗಿ ಬಹುಶಃ ಈತನಿಗೆ ವ್ಯಾಪಾರಿಯನ್ನು ಕೊಲೆ ಮಾಡಿದವನಾರೆಂದು ತಿಳಿದಿರಬಹುದೋ ಎಂಬ ಸಂಶಯವಾಯಿತು.

ಆಕ್ಸೆನೋವ್: "ಸೆಮುನಿಚ್, ನೀನು ಬಹುಶಃ ವ್ಯಾಪಾರಿಯ ಕೊಲೆಯ ವಿಚಾರ ಕೇಳಿ ತಿಳಿದಿರಬಹುದು ಅಥವಾ ನನ್ನನ್ನು ಈ ಮೊದಲು ನೋಡಿರುವೆಯಾ?"

ಸೆಮುನಿಚ್: "ಆ ಘಟನೆಯನ್ನು ತಿಳಿಯದಿರುವುದು ಸಾಧ್ಯವೇ ಇಲ್ಲ. ಅದು ಲೋಕದಲ್ಲೆಲ್ಲಾ ಜನಜನಿತವಾದ ವಿಚಾರ. ಆದರೆ ಘಟನೆಯು ಎಂದೋ ನಡೆದು ಹೋದುದರಿಂದ ಕೇಳಿದ ಎಲ್ಲಾ ವಿವರಗಳೂ ಮರೆತುಹೋಗಿವೆ.''

''ವ್ಯಾಪಾರಿಯನ್ನು ನಿಜವಾಗಿ ಖೂನಿಮಾಡಿದವನಾರೆಂದು ಕೇಳಿರುವೆಯಾ?" ಆಕ್ಸೆನೋವ್ ಕೇಳಿದ.

ಮಕಾರ್ ಸೆಮುನಿಚ್ ನಗಾಡುತ್ತಾ ಹೇಳಿದ:"ಯಾರ ಚೀಲದಲ್ಲಿ ರಕ್ತಲೇಪಿತ ಚೂರಿಯಿತ್ತೋ ಅತನೇ ಕೊಲೆ ಮಾಡಿರಬೇಕು. ಇನ್ನಾರಾದರೂ ಕೊಲೆ ಮಾಡಿ ನಿನ್ನ ಚೀಲದಲ್ಲಿ ಚೂರಿಯನ್ನಡಗಿಸಿದ್ದರೆ ಅತನು ಪತ್ತೆಯಾಗುವ ತನಕ ಅತನು

ಆತನು ಕಳ್ಳನಲ್ಲ. ನಿನ್ನ ಚೀಲವನ್ನು ನಿನ್ನ ತಲೆಯಡಿಯಲ್ಲಿಟ್ಟುಕೊಂಡಿದ್ದಾಗ ನಿನಗೆ ಎಚ್ಚರವಾಗದೆ ಇನ್ನೊಬ್ಬನು ನಿನ್ನ ಚೀಲದಲ್ಲಿ ಚೂರಿಯನ್ನಡಗಿಸುವುದೆಂತು?"

ಈ ಮಾತುಗಳನ್ನು ಕೇಳಿದಾಗ ಈತನೇ ವ್ಯಾಪಾರಿಯನ್ನು ಖೂನಿ ಮಾಡಿದನೆಂದು ಅಕ್ಸೆನೋವನಿಗೆ ಖಚಿತವಾಯಿತು. ಅಕ್ಸೆನೋವ್ ಅಲ್ಲಿ ನಿಲ್ಲದೆ ಬೇರೊಂದೆಡೆಗೆ ಹೋದನು. ಆ ರಾತ್ರಿ ಇಡೀ ನಿದ್ದೆ ಹತ್ತಲಿಲ್ಲ. ಆತನು ಬಹಳವಾಗಿ ನೊಂದುಕೊಂಡನು. ಅನೇಕ ಭಾವನೆಗಳು ಅವನ ಮನಸ್ಸಿನಲ್ಲಿ ಮೂಡಿಬಂದವು. ಕಳೆದು ಹೋದ ನೆನಪುಗಳು ಒಂದೊಂದಾಗಿ ಆತನಿಗಾದುವು. ತಾನು ಅಂದು ಸಂತೆಗೆ ಹೊರಟಾಗ ಹೆಂಡತಿಯು ಹೇಳಿದ ಮಾತುಗಳು, ತನ್ನ ಪ್ರಿಯತಮೆಯ ಸುಂದರ ರೂಪ, ಸವಿಮಾತುಗಳು, ಮಕ್ಕಳ ಮುದ್ದು ಮುಖಗಳು, ಅವರ ತೊದಲ್ನುಡಿಗಳು ಇವುಗಳೆಲ್ಲಾ ಒಂದೊಂದಾಗಿ ಮನಸ್ಸಿಗೆ ಬಂದು ಮಾಯವಾದುವು. ಅನಂತರ ತನ್ನ ಹಿಂದಿನ ಜೀವನದ ಘಟನೆಗಳು ಒಂದೊಂದಾಗಿ ಚಲಚ್ಚಿತ್ರದಂತೆ ಮನಸ್ಸಿಗೆ ಹೊಳೆದವು. ತಾನು ನಿಶ್ಚಿಂತನಾಗಿ ಕುಳಿತು ವೀಣೆಯನ್ನು ನುಡಿಸುತ್ತಿದ್ದಾಗ ತನ್ನನ್ನು ಬಂಧಿಸಿದ ರೀತಿ, ತನಗೆ ಬಲವಾದ ಏಟುಗಳು ಬಿದ್ದ ಸ್ಥಳ ಮೊದಲಾದ ಘಟನೆಗಳಿಂದ ಪ್ರಾರಂಭವಾಗಿ ತನ್ನ ಇಪ್ಪತ್ತಾರು ವರುಷಗಳ ಸೆರೆಮನೆವಾಸದ ಅನುಭವದ ನೆನಪುಗಳೆಲ್ಲವೂ ಒಂದೊಂದಾಗಿ ಆತನಿಗಾದುವು. ಈ ಎಲ್ಲಾ ಆಲೋಚನೆಗಳು ತುಂಬಿದಾಗ ಆ ನಿರ್ಭಾಗ್ಯನು ಆತ್ಮಹತ್ಯೆ ಮಾಡಿಕೊಳ್ಳಲೂ ತಯಾರಾದನು.

ಇಷ್ಟೆಲ್ಲಾ ಸಂಕಷ್ಟಗಳಿಗೆ ಈ ನೀಚನೇ ಕಾರಣನೆಂದು ಆತನು ಆಲೋಚಿಸಿದನು. ಸೆಮನಿಚ್ಚನ ಮೇಲೆ ಆತನಿಗುಂಟಾದ ದ್ವೇಷ ಅಷ್ಟಿಷ್ಟಲ್ಲ. ತಾನು ಸತ್ತರೂ ಚಿಂತೆಯಿಲ್ಲ. ಈ ಸೇಡನ್ನು ತೀರಿಸಿಯೇ ಬಿಡಬೇಕೆಂಬ ಆಲೋಚನೆಯಾಯಿತು. ರಾತ್ರಿಯಿಡೀ ಪ್ರಾರ್ಥನೆಯಲ್ಲೇ ಕಳೆದನು. ಆದರೂ ಶಾಂತಿ ದೊರೆಯಲಿಲ್ಲ. ಹಗಲಿನಲ್ಲಿ ಸೆಮನಿಚ್ಚನ ಸಮೀಪಕ್ಕೆ ಹೋಗಲೂ ಇಲ್ಲ. ಆತನನ್ನು ನೋಡಲೂ ಇಲ್ಲ.

ಹೀಗೆ ಹದಿನಾಲ್ಕು ದಿನಗಳು ಸಂದುಹೋದುವು. ರಾತ್ರಿಗಳಲ್ಲಿ ಅಕ್ಸೆನೋವಿಗೆ ನಿದ್ದೆ ಹತ್ತುತ್ತಿರಲಿಲ್ಲ. ಆತನ ದುಃಖ ಆದರ ಉಚ್ಚಸ್ಥಾನವನ್ನು ಮುಟ್ಟಿತ್ತು. ಆತನಿಗೆ ಏನು ಮಾಡಬೇಕೆಂದು ತೋಚಲಿಲ್ಲ.

ಹೀಗೆ ನಿದ್ದೆಯಿಲ್ಲದೆ ಒಂದು ರಾತ್ರಿ ಆತನು ಜೈಲಿನಲ್ಲಿ ನಡೆಯುತ್ತಿರುವಾಗ ಕೈದಿಗಳು ಮಲಗುವ ಹಲಗೆಯೊಂದರಡಿಯಿಂದ ಕೊರೆದ ಮಣ್ಣು ಹೊರಬರುತ್ತಿರುವುದನ್ನು ನೋಡಿದನು. ಇದೇನಾಗಿರಬಹುದೆಂದು ನೋಡುವುದಕ್ಕಾಗಿ ನಿಂತನು. ಕೂಡಲೇ "ಸೆಮನಿಚ್ಚ"ನು ಹಲಗೆಯಡಿಯಿಂದ ಮೇಲಕ್ಕೆ ಬಂದು ಹೆದರಿಕೆಯಿಂದ ಅಕ್ಸೆನೋವನ್ನು ನೋಡಿದನು. ಅಕ್ಸೆನೋವನು ಆತನನ್ನು ನೋಡದವನಂತೆ

ಮುಂದಕ್ಕೆ ಹೋಗಲುದ್ಯುಕ್ತನಾದನು. ಆದರೆ ಸೆಮನಿಚ್ ಆತನ ಕೈಯನ್ನು ಹಿಡಿದು ನಿಲ್ಲಿಸಿ ಹೀಗೆಂದನು: "ನಾನು ಗೋಡೆಯ ಕೆಳಗಡೆ ಒಂದು ಸುರಂಗವನ್ನು ಕೊರೆಯುತ್ತಿರುವೆನು. ಪ್ರತಿದಿನವೂ ಮಣ್ಣನ್ನು ಬೂಟ್ಸಿನಲ್ಲಿ ತುಂಬಿ ನಮ್ಮನ್ನೆಲ್ಲ ಕೆಲಸಕ್ಕಾಗಿ ಹೊರಬಿಡುವಾಗ ಮಾರ್ಗದ ಬದಿಯಲ್ಲಿ ಅದನ್ನು ಚೆಲ್ಲುತ್ತಿರುವೆನು. ದಯಮಾಡಿ ಈ ವಿಚಾರವನ್ನು ಯಾರಿಗೂ ತಿಳಿಸಬೇಡ. ನೀನೂ ಕೂಡ ಈ ಮಾರ್ಗವಾಗಿ ತಪ್ಪಿಸಿಕೊಳ್ಳಬಹುದು. ಈ ವಿಚಾರ ಎಲ್ಲಿಯಾದರೂ ತಿಳಿದರೆ ಅಧಿಕಾರಿಗಳು ನನ್ನನ್ನು ಸಾಯುವ ತನಕ ಹೊಡೆಯುವುದು ನಿಶ್ಚಯ. ಆದರೆ ಅದಕ್ಕಿಂತ ಮೊದಲು ನಿನ್ನನ್ನು ಕೊಲ್ಲುವೆನು."

ತನ್ನ ವೈರಿಯನ್ನು ನೋಡಿ ಅಕ್ಸೆನೋವ್ ಸಿಟ್ಟಿನಿಂದ ನಡುಗುತ್ತಿದ್ದನು. ಆತನು ತನ್ನ ಕೈಯನ್ನು ಆತನ ಹಿಡಿತದಿಂದ ಬಿಡಿಸುತ್ತಾ 'ನನಗೆ ಜೈಲಿನಿಂದ ತಪ್ಪಿಸಿಕೊಳ್ಳುವ ಆಶೆಯೇ ಇಲ್ಲ. ನೀನು ನನ್ನನ್ನು ಈಗ ಕೊಲ್ಲುವ ಅಗತ್ಯವೇ ಇಲ್ಲ. ನೀನು ನನ್ನನ್ನು ಅನೇಕ ವರ್ಷಗಳ ಹಿಂದೆಯೇ ಕೊಲೆ ಮಾಡಿರುವಿ. ನಿನ್ನ ಈ ವಿಚಾರವನ್ನು ಅಧಿಕಾರಿಗಳಿಗೆ ತಿಳಿಸುವ ಕುರಿತು ನಾನೀಗ ಹೇಳಲಾರೆ. ದೇವರ ಪ್ರೇರಣೆಯಂತೆ ನಡೆಯುವೆನು."

ಮರುದಿನ ಕೈದಿಗಳನ್ನು ಕೆಲಸಕ್ಕಾಗಿ ಕೊಂಡೊಯ್ಯುವಾಗ ಬೂಟ್ಸಿನಿಂದ ಚೆಲ್ಲಿದ ಮಣ್ಣು ಕಂಡು ಬಂತು. ಕೂಡಲೇ ಜೈಲನ್ನು ಹುಡುಕಿ ಸುರಂಗವನ್ನು ಕಂಡುಹಿಡಿದರು. ಜೈಲಿನ ಗವರ್ನರನು ಬಂದು ಈ ಕುರಿತು ಎಲ್ಲರನ್ನು ಪ್ರಶ್ನಿಸಿದನು. ಆದರೆ ಎಲ್ಲರೂ ತಮಗೆ ಈ ವಿಚಾರ ತಿಳಿದಿಲ್ಲವೆಂದುತ್ತರಿಸಿದರು. ಕಡೆಗೆ ಗವರ್ನರನು, ನ್ಯಾಯವಂತನೂ, ಸತ್ಯವಂತನೂ ಆದ ಅಕ್ಸೆನೋವಿನೊಡನೆ ಈ ವಿಚಾರವನ್ನು ಕೇಳಿದನು. ಸೆಮನಿಚ್ಚನು ಏನೂ ತಿಳಿಯದವನಂತೆ ನಟಿಸುತ್ತಿದ್ದನು. ತನ್ನನ್ನು ಪ್ರಶ್ನಿಸಿದೊಡನೆ ಅಕ್ಸೆನೋವಿನ ತುಟಿಗಳೂ ಕೈಗಳೂ ನಡುಗ ತೊಡಗಿದುವು. ಆತನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಆತನು ತನ್ನಲ್ಲೆ ಆಲೋಚಿಸಿದನು: "ನನ್ನ ಜೀವನವನ್ನೇ ನಾಶಮಾಡಿದ ಆತನ ಹೆಸರನ್ನೇಕೆ ಅಡಗಿಸಬೇಕು? ತಾನು ಕಷ್ಟಪಟ್ಟದ್ದಾಗಿದೆ. ಆತನೂ ಕಷ್ಟಪಡಲಿ!.... ಆದರೆ ನಾನೀಗ ಆತನನ್ನು ತೋರಿಸಿಕೊಟ್ಟರೆ ಆತನನ್ನು ಸಾಯುವ ತನಕ ಹೊಡೆಯುವರು. ಒಂದು ವೇಳೆ ನನಗೆ ಆತನಲ್ಲಿರುವ ಸಂಶಯ ನಿಜವಲ್ಲದಿರಲೂ ಬಹುದು. ಅವನ ಹೆಸರನ್ನು ಸೂಚಿಸುವುದರಿಂದ ನನಗೇನು ಲಾಭ?"

"ವೃದ್ಧನೇ, ನಿಜ ಹೇಳು. ಯಾರು ಸುರಂಗವನ್ನು ಕೊರೆದವರು?" ಗವರ್ನರ್ ಕೇಳಿದ. ಆಗ ಅಕ್ಸೆನೋವ್ ಒಮ್ಮೆ ಸೆಮನಿಚ್ಚನನ್ನು ನೋಡಿ ಹೀಗೆಂದನು:

"ದೊರೆಯೇ, ನಾನು ಹೇಳಲಾರೆ. ನಾನು ಹೇಳುವುದು ದೇವರ ಇಚ್ಛೆಯಿಲ್ಲ! ನೀವು ನನ್ನನ್ನು ಏನು ಬೇಕಾದರೂ ಮಾಡಬಹುದು."

ಗವರ್ನರ್ ಎಷ್ಟು ಪ್ರಯತ್ನಪಟ್ಟರೂ, ಅಕ್ಸೆನೋವನು ಹೇಳಲಿಲ್ಲ. ಆದ್ದರಿಂದ ಆ ವಿಚಾರವನ್ನು ಅಲ್ಲಿಯೇ ಬಿಡಬೇಕಾಯಿತು.

ಆ ರಾತ್ರಿ ಅಕ್ಸೆನೋವನು ತನ್ನ ಹಾಸಿಗೆಯಲ್ಲಿ ಮಲಗಿಕೊಂಡಿದ್ದನು. ನಿದ್ದೆ ಇನ್ನೂ ಬಂದಿರಲಿಲ್ಲ. ಯಾವನೋ ಒಬ್ಬ ಕೈದಿಯು ಬಂದು ಆತನ ಹಾಸಿಗೆಯ ಬದಿಯಲ್ಲಿ ಕುಳಿತುಕೊಂಡನು. ಆತನು ಸೆಮುನಿಚ್ಚನೆಂದು ತಿಳಿಯಿತು.

"ನನ್ನಿಂದ ನಿನಗೆ ಇನ್ನೇನಾಗಬೇಕು? ಇಲ್ಲಿಗೆ ಯಾಕೆ ಬಂದಿರುವಿ?" ಅಕ್ಸೆನೋವ್ ಕೇಳಿದ. ಸೆಮುನಿಚ್ಚನು ಮೌನವಾಗಿಯೇ ಇದ್ದನು.

"ನಿನಗೇನು ಬೇಕು? ಇಲ್ಲಿಂದ ಹೋಗು. ಇಲ್ಲದಿದ್ದರೆ ಅಧಿಕಾರಿಯನ್ನು ಕರೆಯುವೆನು''—ಅಕ್ಸೆನೋವ್ ಹೇಳಿದ.

ಸೆಮುನಿಚ್ಚನು ಅಕ್ಸೆನೋವಿನ ಹತ್ತಿರಕ್ಕೆ ಬಾಗಿ "ದಯಮಾಡಿ ನನ್ನನ್ನು ಕ್ಷಮಿಸು" ಎಂದನು.

''ಯಾತಕ್ಕಾಗಿ?" ಅಕ್ಸೆನೋವ್ ಕೇಳಿದ.

ಸೆಮುನಿಚ್: ''ಅಂದು ಆ ವ್ಯಾಪಾರಿಯನ್ನು ಕೊಂದು ಚೂರಿಯನ್ನು ನಿನ್ನ ಚೀಲದಲ್ಲಿ ಅಡಗಿಸಿಟ್ಟವನು ನಾನೇ. ನಿನ್ನನ್ನು ಕೊಲೆ ಮಾಡಬೇಕೆಂಬ ಉದ್ದೇಶ ನನಗಿತ್ತು. ಆದರೆ ಅಷ್ಟರಲ್ಲಿ ಏನೋ ಶಬ್ದ ಕೇಳಿಬಂತು. ಕೂಡಲೇ ಚೂರಿಯನ್ನಡಗಿಸಿಟ್ಟು ಕಿಟಕಿಯ ಮೂಲಕ ನಾನು ಪರಾರಿಯಾದೆ.

ಅಕ್ಸೆನೋವ್‌ಗೆ ಏನು ಹೇಳಬೇಕೆಂದು ತೋಚಲಿಲ್ಲ. ಆದರೆ ಸೆಮುನಿಚ್ಚನು ಮೊಣಕಾಲನ್ನೂರಿಕೊಂಡು ಪುನಃ ಪುನಃ ಕ್ಷಮೆ ಬೇಡಿದನು.

"ನಾನು ನನ್ನ ಅಪರಾಧವನ್ನು ಒಪ್ಪಿಕೊಳ್ಳುವೆನು. ಆಗ ನಿನ್ನ ಬಿಡುಗಡೆಯಾದೀತು. ನೀನು ನಿನ್ನ ಮನೆಗೆ ಹೋಗಬಹುದು" ಸೆಮುನಿಚ್ ಹೇಳಿದನು. ದುಃಖಿತನಾದ ಅಕ್ಸೆನೋವ್ "ನನಗಿನ್ನೆಲ್ಲಿಯ ಮನೆ! ನಿನಗೆ ಹೇಳುವುದಕ್ಕೆ ಸುಲಭ. ಆದರೆ ನಿನಗಾಗಿ ಇಪ್ಪತ್ತಾರು ವರ್ಷಗಳ ಕಾಲ ನಾನಿಲ್ಲಿ ಕಷ್ಟವನ್ನನುಭವಿಸಿದೆ. ಈಗ ನಾನೆಲ್ಲಿ ಹೋಗಲಿ?....ನನ್ನ ಹೆಂಡತಿ ಎಂದೋ ಮಡಿದಿರುವಳು...ನನ್ನ ಮಕ್ಕಳು ನನ್ನನ್ನು ಮರೆತಿರುವರು...ನನಗೆ ಹೋಗುವುದಕ್ಕೆ ಇನ್ನೆಲ್ಲಿಯ ಸ್ಥಳವಿದೆ?''...

ಆದರೆ ಸೆಮುನಿಚ್ಚನು ಕದಲಲಿಲ್ಲ. ತನ್ನ ತಲೆಯನ್ನು ನೆಲಕ್ಕೆ ಬಡಿದುಕೊಂಡನು. ದಯಮಾಡಿ ತನ್ನನ್ನು ಕ್ಷಮಿಸು ಎಂದು ಕೂಗಿದನು.

ಸೆಮುನಿಚ್: ''ಅಧಿಕಾರಿಗಳು ನನ್ನನ್ನು ಬಲವಾಗಿ ಬಡಿದಾಗಲೂ ಕೂಡಾ ನಿನ್ನನ್ನು ಈಗ ನೋಡುವಾಗ ಆಗುವಷ್ಟು ನೋವಾಗಿಲ್ಲ...ನೀನೆಷ್ಟು ದಯಾವಂತ! ನಾನು ನಿನಗೆಷ್ಟು ಅನ್ಯಾಯ ಮಾಡಿದ್ದರೂ ನೀನು ನನ್ನಲ್ಲಿ ಕರುಣೆ ತೋರಿರುವಿ. ನಾನು ನಿಜವಾಗಿಯೂ ನೀಚ. ದಯಮಾಡಿ ನನ್ನನ್ನು ಕ್ಷಮಿಸಲಾರೆಯಾ?'' ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತನು. ಆತನ ದುಃಖವನ್ನು ನೋಡಿ ಅಕ್ಸೆ

೧೯೪೬ರಲ್ಲಿ ಹೀಗೆಂದಿದ್ದರು: "ನಿಸರ್ಗಚಿಕಿತ್ಸೆಯು ಹಳ್ಳಿ ಹಳ್ಳಿಗೂ ಹೋಗ ಬೇಕು. ಕೋಟ್ಯಾಂತರ ಮಂದಿಗೆ ಇದರ ಲಾಭ ದೊರೆಯುವಂತಾಗಬೇಕು. ನಿಸರ್ಗ ಸೇವಾನಿಲಯಗಳು ಅಲ್ಲಲ್ಲಿ ಮೂಡಿ ಬರಬೇಕು; ಬಂದೀತು. ನಮಗೆ ದೈವ ಕೃಪೆಯಿದೆ. ಇದಕ್ಕೆ ತುಂಬಾ ತ್ಯಾಗವೂ ಸೇವೆಯೂ ಅಗತ್ಯ."

ನಿಸರ್ಗಚಿಕಿತ್ಸಾ ವಿಶ್ವವಿದ್ಯಾಲಯವೂ ಗಾಂಧೀಜಿಯವರ ರಾಮರಾಜ್ಯದ ಕನಸಿನಲ್ಲಿ ಸೇರಿತ್ತು. ಸರದಾರ ಪಟೇಲರಿಗೊಮ್ಮೆ ಆ ಕುರಿತು ಅವರು ಸೂಚಿಸಿದ್ದರು.

ಗಾಂಧೀಜಿ ಇರುತ್ತಿದ್ದರೆ ನಿಸರ್ಗಚಿಕಿತ್ಸೆಯ ದಿವ್ಯ ವರವು ಸಕಲ ಜನತೆಗೂ ತಲಪುತ್ತಿತ್ತೋ ಏನೋ. ಆದರೆ ಎಷ್ಟೋ ಅಜ್ಞಾನೀ ಹೃದಯಗಳು ನಮ್ಮ ಮಧ್ಯೆ ಇನ್ನೂ ಇರುವಾಗ? ಗಾಂಧೀಜಿ ಒಂದು ಸಾಗರದಂತೆ. ಒಬ್ಬನಿಗೆ ಅಲ್ಲಿ ಕಲ್ಲು ಮುಳ್ಳುಗಳೇ ಕಾಣಿಸಿದುವು. ಅಂದು ಜನವರಿ ಮೂವತ್ತು. ಮೂರು ಬಾರಿ ಗುಂಡು ಹಾರಿತು; ಗಾಂಧೀಜಿ ಬಿದ್ದರು. ಅವರ ಜೀವನವೂ ಅಗಲೇ ಮುಗಿದಿತ್ತು. ಎಂತೂ ಕಳೆದುಹೋದ ಜೀವಕ್ಕಾಗಿ ಡಾ॥ ಭಾರ್ಗವರು ಮದ್ದು ಹುಡುಕಬೇಕಾಗಿ ರಲಿಲ್ಲ.

ಪ್ರಸ್ತಾವನೆ

ನಿಸರ್ಗ ಜೀವನದ ಪವಿತ್ರ ಸಂದೇಶವನ್ನು ಸಾರುವ ಉಚ್ಚಧ್ಯೇಯದಿಂದ ಈ ಚಿಕ್ಕ ಲೇಖನ ಬರೆದಿದ್ದೇನೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇನೆ. ಈ ಬರಹವನ್ನು ಪ್ರಕಟಿಸಲು ನೆರವಾದ ಶ್ರೀ। ಎಚ್. ಎಂ. ನಾರಾಯಣ ಭಟ್ ಇವರಿಗೂ, ಪ್ರಕಟಿಸಿದ ಶ್ರೀ। ಶೆಣ್ಯಾಯವರಿಗೂ ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಪ್ರತಿಗಳು ಬೇಕಾದವರು ಅಂಚೆ ವೆಚ್ಚ 0-1-0 ಸಹಿತ, ಒಟ್ಟು ಎರಡಾಣೆ ಅಂಚೆ ಚೀಟಿನೊಂದಿಗೆ, ಕೆಳಗಿನ ವಿಳಾಸಕ್ಕೆ ಬರೆದೂ ತರಿಸಿಕೊಳ್ಳಬಹುದು.

ಶ್ರೀ। ಬಿ. ಸುಬ್ರಾಯ ಭಟ್,
ಶ್ರೀ ನಿಸರ್ಗ ಸೇವಾ ನಿಲಯ,
ಬಾವಟೆಗುಡ್ಡೆ, ಮಂಗಳೂರು, (ದ. ಕ.)
27—3—1956

ಲೇಖಕ.

'ಒಂದಾಣೆಮಾಲೆ' ಪುಸ್ತಕಗಳು ಪ್ರತಿ ಶನಿವಾರ ಹೊರಡುತ್ತವೆ. ಒಂದೊಂದು ವಾರ ಒಂದೊಂದು ಹೊಸ ಪುಸ್ತಕ. ಪ್ರತಿಯೊಂದಕ್ಕೆ ಒಂದಾಣೆ. ಈ ಮಾಲೆಯಲ್ಲಿ, 1956ನೇ ಮಾರ್ಚ್ ಕೊನೆಯ ವಾರದ ವರೆಗೆ 80 ಪುಸ್ತಕಗಳು ಹೊರಟಿವೆ.

ಏಜಂಟರಿಲ್ಲದ ಕಡೆಗಳ ಪುಸ್ತಕ ವ್ಯಾಪಾರಿಗಳು ಏಜನ್ಸಿಗಾಗಿ ಬರಕೊಳ್ಳಿರಿ

ಒಂದಾಣೆ ಮಾಲೆಯ ಪುಸ್ತಕಗಳು ಟಪ್ಪಾಲು ಮೂಲಕ ಬೇಕಾದವರಿಗೆ

ಒಂದಾಣೆ ಮಾಲೆಯ ಪುಸ್ತಕಗಳನ್ನು ಆಯಾಯ ಸ್ಥಳದ ಏಜಂಟರಿಂದಲೇ ಪಡಕೊಳ್ಳುವುದು ಒಳ್ಳೇದು. ಇದರಿಂದ ಟಪ್ಪಾಲು ಖರ್ಚು ಉಳಿಯುವುದು.

ಏಜಂಟರು ಇಲ್ಲದ ಕಡೆಗಳಲ್ಲಿ, ಟಪ್ಪಾಲು ಮೂಲಕ ಅಪೇಕ್ಷಿಸುವವರು, ಬೇಕಾದ ಪುಸ್ತಕಗಳ ಕ್ರಯವನ್ನೂ, ಟಪ್ಪಾಲು ಖರ್ಚನ್ನೂ ಮುಂಗಡವಾಗಿ ಕಳುಹಿಸಬೇಕು. ಪ್ರತಿ ಪುಸ್ತಕದ ಬೆಲೆ ಒಂದಾಣೆ. ಸಾಧಾರಣ ಪ್ರತೀ ಮೂರು ಪುಸ್ತಕಗಳಿಗೆ ಟಪ್ಪಾಲು ಖರ್ಚು ಒಂದಾಣೆ. ಈ ಪ್ರಕಾರ ಕಳುಹಿಸಬೇಕು.

ಒಂದು ವರ್ಷದ 52 ಪುಸ್ತಕಗಳು ಬೇಕಾದವರು, ರೂ. 4-8-0 ಮುಂಗಡವಾಗಿ ಕಳುಹಿಸಿದರೆ, ಆಗಲೇ ಪ್ರಕಟವಾಗಿದ್ದ ಪುಸ್ತಕಗಳನ್ನು ಹಣ ತಲಪಿದ ಕೂಡಲೆ ಕಳುಹಿಸುವುದಲ್ಲದೆ, ಆ ಮೇಲೆ ಒಮ್ಮೆಗೆ ಪ್ರತೀ ಮೂರು ಅಥವಾ ನಾಲ್ಕು ಪುಸ್ತಕಗಳಂತೆ ಅವುಗಳು ಪ್ರಕಟವಾದ ಹಾಗೆ, ಒಟ್ಟು 52 ಪುಸ್ತಕಗಳಾಗುವ ವರೆಗೆ ಟಪ್ಪಾಲಿನಲ್ಲಿ ಕಳುಹಿಸಲಾಗುವುದು.

ವಿ. ಪಿ. ಕಳುಹಿಸಲಾಗುವುದಿಲ್ಲ.

ಒಂದಾಣೆ ಮಾಲೆ,

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು-೧.

Edited, Printed & Published by K. V. Shenoy
at The Prabhat Printers, Ltd., Mangalore.